ಕರ್ನಾಟಕ ಸರ್ಕಾರ

# ಮೀನುಗಾರಿಕೆ ಇಲಾಖೆ

## ವಾರ್ಷಿಕ ವರದಿ

## 2018–19

# ಮೀನುಗಾರಿಕೆ ಇಲಾಖೆ

## ವಾರ್ಷಿಕ ವರದಿ

## 2018–19

# ಮೀನುಗಾರಿಕೆ ಇಲಾಖೆ

## ವಾರ್ಷಿಕ ವರದಿ 2018–19

1.1 ಮೀನುಗಾರಿಕೆಯು ಪೌಷ್ಠಿಕ ಆಹಾರ, ವಿದೇಶಿ ವಿನಿಮಯ ಹಾಗೂ ಉದ್ಯೋಗಾವಕಾಶದ ಸೃಷ್ಠಿಯ ಮೂಲವಾಗಿರುವುದರಿಂದ ರಾಜ್ಯದ ಹಾಗೂ ದೇಶದ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ.

1.2 ಕರ್ನಾಟಕ ರಾಜ್ಯವು 2.93 ಲಕ್ಷ ಹೆಕ್ಟೇರ್ ಜಲ ವಿಸ್ತೀರ್ಣವುಳ್ಳ ಕೆರೆ, ಕೊಳಗಳನ್ನು ಮತ್ತು 2.72 ಲಕ್ಷ ಹೆಕ್ಟೇರ್ ವಿಸ್ತೀರ್ಣವುಳ್ಳ ಜಲಾಶಯಗಳನ್ನೊಳಗೊಂಡು ಒಟ್ಟು 5.65 ಲಕ್ಷ ಹೆಕ್ಟೇರಿನಷ್ಟು ವಿಸ್ತೀರ್ಣವುಳ್ಳ ಒಳನಾಡು ಜಲ ಸಂಪನ್ಮೂಲವನ್ನು ಹೊಂದಿದೆ. ಇದರ ಜೊತೆಗೆ 8000 ಹೆಕ್ಟೇರಿನಷ್ಟು ಹಿನ್ನೀರು ಪ್ರದೇಶ, 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶ ಹಾಗೂ 27,000 ಚ. ಕಿ.ಮೀ. ವಿಸ್ತೀರ್ಣದ ವಿಶಾಲವಾದ ಭೂಖಂಡ ಪ್ರದೇಶವನ್ನು ಹೊಂದಿದ್ದು, ಮೀನುಗಾರಿಕೆಯ ಅಭಿವೃದ್ಧಿಗೆ ವಿಫುಲ ಅವಕಾಶ ಹೊಂದಿರುತ್ತದೆ.

1.3 2018–19 ನೇ ಸಾಲಿನಲ್ಲಿ ಕಡಲ ಮೀನು ಉತ್ಪಾದನೆಯು 3.89 ಲಕ್ಷ ಮೆಟ್ರಿಕ್ ಟನ್‌ಗಳಷ್ಟಾಗಿರುತ್ತದೆ. ಕಡಲ ಮೀನುಗಾರಿಕೆಯ ಕಾರ್ಯಾಚರಣೆಯಲ್ಲಿ 4542 ಯಾಂತ್ರೀಕೃತ ದೋಣಿಗಳು, 8949 ಮೋಟರೀಕೃತ ದೋಣಿಗಳು ಮತ್ತು 9044 ನಾಡ ದೋಣಿಗಳಿವೆ. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ರಾಜ್ಯದ ಒಟ್ಟು ಕಡಲ ಮೀನು ಉತ್ಪಾದನೆಯಲ್ಲಿ ಶೇಕಡ 85ಕ್ಕಿಂತಲೂ ಹೆಚ್ಚಿನ ಪ್ರಮಾಣದ ಮೀನನ್ನು ಹಿಡಿಯುತ್ತಿವೆ.

1.4 2017–18 ನೇ ಸಾಲಿನಲ್ಲಿ ರೂ.1793.41 ಕೋಟಿ ಮೌಲ್ಯದ 1,44,235 ಮೆಟ್ರಿಕ್ ಟನ್‌ಗಳಷ್ಟು ಕಡಲ ಉತ್ಪನ್ನಗಳನ್ನು ರಾಜ್ಯದಿಂದ ರಫ್ತು ಮಾಡಲಾಗಿದೆ.

1.5 "ಮೀನುಗಾರಿಕೆ ದೋಣಿಗಳಿಗೆ ಡೀಸೆಲ್– ಮಾರಾಟ ತೆರಿಗೆ ಮರುಪಾವತಿ" ಎಂಬ ಯೋಜನೆಯಲ್ಲಿ ಯಾಂತ್ರೀಕೃತ ದೋಣಿಗಳು ಮೀನುಗಾರಿಕೆಗೆ ಬಳಸಿದ ಡೀಸೆಲ್ ಮೇಲಿನ ಮಾರಾಟ ಕರಕ್ಕೆ ಸಮಾನವಾದ ಮೊತ್ತವನ್ನು ಸಹಾಯಧನವಾಗಿ ದೋಣಿ ಮಾಲೀಕರ ಬ್ಯಾಂಕು ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತಿದೆ. 2018–19ನೇ ಸಾಲಿನಲ್ಲಿ ರೂ.147.20 ಕೋಟಿಗಳ ಸಹಾಯಧನವನ್ನು 3632 ಮೀನುಗಾರಿಕೆ ದೋಣಿಗಳ ಮಾಲೀಕರಿಗೆ ನೀಡಲಾಗಿದೆ.

1.6 ಕರಾವಳಿಯಲ್ಲಿ ಪರ್ಮಿಟ್ ಪಡೆದ 4514 ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳು ಕಾರ್ಯಾಚರಣೆಯಲ್ಲಿದ್ದು, ಮಾಸಿಕ 1355 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರ ದರದಲ್ಲಿ ನೀಡಲಾಗುತ್ತಿದೆ. 2018–19 ನೇ ಸಾಲಿನಲ್ಲಿ ಈ ದೋಣಿಗಳು ಬಳಸುವ ಸೀಮೆ ಎಣ್ಣೆಯನ್ನು ಪಡಿತರ ದರದಲ್ಲಿ ನೀಡಲು ರೂ.1907.98 ಲಕ್ಷ ವೆಚ್ಚ ಮಾಡಲಾಗಿದೆ

1.7 ಮತ್ಸ್ಯಾಶ್ರಯ ಯೋಜನೆಯಡಿ ಮೀನುಗಾರರ ಕುಟುಂಬಗಳಿಗೆ 3000 ಮನೆಗಳನ್ನು ನಿರ್ಮಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಸದರಿ ಮನೆಗಳ ನಿರ್ಮಾಣವನ್ನು ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಕೈಗೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದ್ದು, ರೂ.24.70 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

1.8 ಕುಳಾಯಿಯಲ್ಲಿ ಶಿಪ್ಪಿಂಗ್ ಮಂತ್ರಾಲಯ (50%), ನವ ಮಂಗಳೂರು ಪೋರ್ಟ್ ಟ್ರಸ್ಟ್ (45%) ಮತ್ತು ರಾಜ್ಯ ಸರ್ಕಾರದ (5%) ಆರ್ಥಿಕ ನೆರವಿನೊಂದಿಗೆ ಮೀನುಗಾರಿಕೆ ಬಂದರಿನ ನಿರ್ಮಾಣವನ್ನು ರೂ.196.51 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಕೇಂದ್ರ ಸರ್ಕಾರದ ಮಂಜೂರಾತಿ ನೀಡಿದೆ. ಕೇಂದ್ರ ಸರ್ಕಾರವು ರೂ.49.13 ಕೋಟಿ ಬಿಡುಗಡೆಗೊಳಿಸಲಾಗಿದೆ. ಸದರಿ ಮೊತ್ತಕ್ಕೆ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.4.91 ಕೋಟಿ ಸೇರಿಸಿ ಒಟ್ಟು ರೂ.54.04 ಕೋಟಿಗಳನ್ನು ನವ ಮಂಗಳೂರು ಪೋರ್ಟ್ ಟ್ರಸ್ಟ್ ಇವರಿಗೆ ಬಿಡುಗಡೆಗೊಳಿಸಿದೆ.

1.9 ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕೆ ಬಂದರನ್ನು ರೂ.138.60 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಕೇಂದ್ರ ಸರ್ಕಾರದ ಮಂಜೂರಾತಿ ನೀಡಿದ್ದು, ಪ್ರಥಮ ಕಂತಿನ ಅನುದಾನ ರೂ.13.86 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

1.10 ಉತ್ತರ ಕನ್ನಡ ಜಿಲ್ಲೆ, ಮುರುಡೇಶ್ವರದಲ್ಲಿ ಸುಮಾರು 165 ಯಾಂತ್ರೀಕೃತ ಮತ್ತು 460 ನಾಡದೋಣಿಗಳು ಕಾರ್ಯನಿರ್ವಹಿಸುತ್ತಿದ್ದು, ಈ ದೋಣಿಗಳ ಸುರಕ್ಷಿತ ಇಳಿದಾಣಕ್ಕೆ ಹೊರ ಬಂದರು (Outer harbour) ನಿರ್ಮಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಪೂರ್ವಭಾವಿ ಅಧ್ಯಯನವನ್ನು ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ.

1.11 ಅಳ್ವೆಕೋಡಿ–ತೆಂಗಿನಗುಂಡಿ ಇಳಿದಾಣ ಕೇಂದ್ರದ ಅಲೆತಡೆಗೋಡೆ ನಿರ್ಮಾಣವನ್ನು ರೂ.86.08 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ರಾಜ್ಯ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಮುಂದುವರೆದು ಸದರಿ ಯೋಜನೆಗೆ ಕೇಂದ್ರ ಸರ್ಕಾರವು ಶೇ.50 ರಷ್ಟು ನೆರವು ನೀಡಲು ಕೇಂದ್ರ ಸರ್ಕಾರದ ಯೋಜನಾ ಮಂಜೂರಾತಿ ಸಮಿತಿಯಲ್ಲಿ ಸಹಮತಿ ನೀಡಲಾಗಿದೆ.

1.12 "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಆಯ್ದ ದೀರ್ಘಾವಧಿ ನೀರಿರುವ ಕೆರೆಗಳಲ್ಲಿ 2500 ಹೆಕ್ಟೇರ್ ಪ್ರದೇಶದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಿ ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಗರಿಷ್ಠ ರೂ.27,000ಗಳ ಸಹಾಯಧನ ನೀಡುವ ಯೋಜನೆಯಡಿ 80 ಕೆರೆಗಳಲ್ಲಿ ಮೀನು ಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಯಡಿ ರೂ.149.44 ಲಕ್ಷ ವೆಚ್ಚ ಮಾಡಲಾಗಿದೆ.

1.13 ಮೀನು ಮರಿಗಳನ್ನು ಹಿಡಿಯುವುದನ್ನು ತಪ್ಪಿಸಿ ಮತ್ಸ್ಯ ಸಂಪತ್ತನ್ನು ರಕ್ಷಿಸಲು ಮೀನುಗಾರರಿಗೆ ಕಾಡ್ ಎಂಡ್‌ನಲ್ಲಿ 35 ಎಂಎಂ ಸ್ಕ್ವೇರ್ ಮೆಶ್ ಬಲೆಗಳನ್ನು ಉಚಿತವಾಗಿ ನೀಡುವ ನೂತನ ಯೋಜನೆಯಡಿ 2500 ಟ್ರಾಲ್ ದೋಣಿಗಳಿಗೆ ತಲಾ ರೂ.10,000 ಗಳಂತೆ ಉಚಿತವಾಗಿ ಸ್ಕ್ವೇರ್ ಮೆಶ್ ಬಲೆಗಳನ್ನು ವಿತರಿಸಲಾಗಿದೆ. ರೂ.2.50 ಕೋಟಿ ವೆಚ್ಚ ಮಾಡಲಾಗಿದೆ.

1.14 ಮೀನು ಮಾರಾಟಗಾರರು ಮಾರಾಟವಾಗದೇ ಉಳಿಯುವ ಮೀನನ್ನು ಮೀನು ಮಾರುಕಟ್ಟೆಗಳಲ್ಲಿ ಶೀಥಲೀಕೃತ ಘಟಕದಲ್ಲಿ ಸಂಗ್ರಹಿಸಲು "ಮತ್ಸ್ಯ ಜೋಪಾಸನೆ ಯೋಜನೆ"ಯಡಿ ರಾಜ್ಯದಲ್ಲಿ ಶಿಥಲೀಕೃತ ಘಟಕಗಳನ್ನು ಸ್ಥಾಪಿಸಲು ಮಂಜೂರಾತಿ ಪಡೆಯಲಾಗಿದೆ. ಇದಕ್ಕಾಗಿ ರೂ.1.00 ಕೋಟಿ ಅನುದಾನ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.

1.15 ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ ರೂ.50,000 ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ನೀಡುತ್ತಿರುವ ಸಾಲವನ್ನು 2018–19ನೇ ಸಾಲಿನಿಂದ ಶೂನ್ಯ ಬಡ್ಡಿ ದರದಲ್ಲಿ ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1.16 ನೀಲಿಕ್ರಾಂತಿ ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ 40% ಮತ್ತು ಪ.ಜಾ/ ಪ.ಪಂ/ ಮಹಿಳೆಯರಿಗೆ 60% ಸಹಾಯಧನವನ್ನು ನೀಡಲಾಗುತ್ತದೆ. ಈ ಯೋಜನೆಯಡಿ ರೂ.939.45 ಲಕ್ಷಗಳನ್ನು ವಿವಿಧ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗಿದೆ.

1.17 ರಾಜ್ಯದ ಒಳನಾಡು ಜಲ ಸಂಪನ್ಮೂಲಗಳಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ


ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು “ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ” ಯೋಜನೆಗೆ ಮಂಜೂರಾತಿ ಪಡೆಯಲಾಗಿದೆ.

1.18 ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಮೀನುಗಾರರಿಗೆ 82 ಪ್ರಕರಣಗಳಲ್ಲಿ ರೂ.150.46 ಲಕ್ಷ ಪರಿಹಾರ ನೀಡಲಾಗಿದೆ.

1.19 ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ರೂ.866.68 ಲಕ್ಷಗಳ ಪರಿಹಾರವನ್ನು ಸುಮಾರು 39,518 ಮೀನುಗಾರರರಿಗೆ ನೀಡಲಾಗಿದೆ.

1.20 ಗಿರಿಜನ ಉಪಯೋಜನೆಯಡಿ ಪರಿಶಿಷ್ಠ ಪಂಗಡಕ್ಕೆ ಸೇರಿದ 15 ಫಲಾನುಭವಿಗಳಿಗೆ ರೂ.102.98 ಲಕ್ಷ ವೆಚ್ಚದಲ್ಲಿ ಸಂಚಾರಿ / ರೀಟೇಲ್ ಮೀನು ಕ್ಯಾಂಟೀನ್/ ತಾಜಾ ಮೀನು ಮಾರಾಟ ವಾಹನಗಳನ್ನು ಖರೀದಿಸಲು ಸಹಾಯಧನ ನೀಡಲಾಗಿದೆ.

1.21 **ಮೀನುಗಾರಿಕೆ ಇಲಾಖೆಯ ಆಡಳಿತ ರೂಪರೇಷೆ**



ಮೀನುಗಾರಿಕೆ ಇಲಾಖೆಯು ಮೀನುಗಾರಿಕೆ ಸಚಿವರ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ. ಸರ್ಕಾರದ ಹಂತದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರು ಮುಖ್ಯಸ್ಥರಾಗಿರುತ್ತಾರೆ. ಮೀನುಗಾರಿಕೆ ಇಲಾಖೆಯ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಮೀನುಗಾರಿಕೆ ನಿರ್ದೇಶಕರ ನೇತೃತ್ವದಲ್ಲಿ ನಡೆಯುತ್ತಿವೆ. ನಿರ್ದೇಶಕರ ಸಹಾಯಕ್ಕಾಗಿ ನಿರ್ದೇಶನಾಲಯದಲ್ಲಿ ಇಬ್ಬರು ಜಂಟಿ ನಿರ್ದೇಶಕರು, ಒಬ್ಬರು ಉಪ ನಿರ್ದೇಶಕರು, ಒಬ್ಬರು ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು (ಆಡಳಿತ) ಹಾಗೂ 10 ಸಹಾಯಕ ನಿರ್ದೇಶಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. 8 ಪ್ರಾಂತೀಯ ಉಪ ನಿರ್ದೇಶಕರು, 30 ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳು ಹಾಗೂ 125 ತಾಲ್ಲೂಕು ಮಟ್ಟದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇಲಾಖೆಯಲ್ಲಿ ಒಟ್ಟು 1401 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, 685 ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳು ಭರ್ತಿಯಾಗಿದ್ದು 716 ಹುದ್ದೆಗಳು ಖಾಲಿ ಇವೆ.

## 2. 2018–19 ರ ವಾರ್ಷಿಕ ಯೋಜನೆ:

2018–19 ನೇ ಸಾಲಿನಲ್ಲಿ ಒಟ್ಟು ರೂ.24,834.00 ಲಕ್ಷಗಳ ಅನುದಾನವನ್ನು ನೀಡಲಾಗಿತ್ತು. ಕೆಲವು ಯೋಜನೆಗಳಿಗೆ ಅಗತ್ಯತೆಗೆ ಅನುಗುಣವಾಗಿ ಹೆಚ್ಚುವರಿ ಅನುದಾನ ರೂ.12,265.59 ಲಕ್ಷಗಳನ್ನು ನೀಡಲಾಗಿದೆ. ಹೀಗೆ ಮೀನುಗಾರಿಕೆ ಇಲಾಖೆಗೆ 2018–19 ನೇ ಸಾಲಿನಲ್ಲಿ ಒಟ್ಟು ರೂ.37,099.59 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ವಿವರಗಳನ್ನು ಕೆಳಗಿನಂತೆ ನೀಡಲಾಗಿದೆ.

**(ರೂ.ಲಕ್ಷಗಳಲ್ಲಿ)**

| **ವಿವರ** | **ರಾಜ್ಯದ ಪಾಲು** | **ಕೇಂದ್ರದ ಪಾಲು** | **ಒಟ್ಟು** |
|---|---|---|---|
| **ರಾಜ್ಯ ವಲಯ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 22573.10 | 1159.57 | 23732.67 |
| ಆ) 4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 4065.67 | 5917.25 | 9982.92 |
| **ಒಟ್ಟು ರಾಜ್ಯ ವಲಯ** | **26638.77** | **7076.82** | **33715.59** |
| **ಜಿಲ್ಲಾ ಪಂಚಾಯತ್ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 3384.00 | – | 3384.00 |
| **ಒಟ್ಟು** | **30022.77** | **7076.82** | **37099.59** |

ಹೆಚ್ಚುವರಿ ಅನುದಾನ ಪಡೆದ ಯೋಜನೆಗಳ ವಿವರಗಳು ಕೆಳಗಿನಂತೆ ನೀಡಲಾಗಿದೆ.

| **ಕ್ರ.ಸಂ** | **ಯೋಜನೆ** | **ಹೆಚ್ಚುವರಿ ಅನುದಾನ (ರೂ.ಲಕ್ಷ)** |
|---|---|---|
| 1. | ಕೇಂದ್ರ ಪುರಸ್ಕೃತ ಯೋಜನೆ ನೀಲಿ ಕ್ರಾಂತಿ – ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ–2405–00–101–0–58 | 630.23 |
| 2. | ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ – ಮಾರಾಟ ತೆರಿಗೆ ಮರುಪಾವತಿ–2405–00–103–0–23 | 2780.00 |
| 3. | ಸಾಂಪ್ರದಾಯಿಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು–2405–00–103–0–17 | 857.98 |

| ಕ್ರ.ಸಂ | ಯೋಜನೆ | ಹೆಚ್ಚುವರಿ ಅನುದಾನ (ರೂ.ಲಕ್ಷ) |
|---|---|---|
| 4. | ಮೀನುಗಾರರ ಕಲ್ಯಾಣ ಯೋಜನೆ – ಉಳಿತಾಯ ಮತ್ತು ಪರಿಹಾರ ಯೋಜನೆ–2405–00–120–0–07 | 923.46 |
| 5. | ಮೀನುಗಾರಿಕೆ ಬಂದರುಗಳ ನಿರ್ಮಾಣ – ಕೇಂದ್ರ ಪುರಸ್ಕೃತ ಯೋಜನೆ–4405–00–103–6–01 | 7073.92 |
| | **ಒಟ್ಟು** | **12265.59** |

2018–19 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಮೀನುಗಾರಿಕೆ ಇಲಾಖೆಗೆ ಒಟ್ಟು ರೂ.7868.28 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಇದಲ್ಲದೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.388.00 ಲಕ್ಷಗಳ ಅನುದಾನ ನೀಡಲಾಗಿದೆ.

**2018–19 ನೇ ಸಾಲಿನ ಆರ್ಥಿಕ ಪ್ರಗತಿಯ ಸಂಕ್ಷಿಪ್ತ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.**

**ಆರ್ಥಿಕ ಪ್ರಗತಿ:**

**(ರೂ.ಲಕ್ಷಗಳಲ್ಲಿ)**

| ವಿವರ | ಅನುದಾನ | ಬಿಡುಗಡೆ | ವೆಚ್ಚ |
|---|---|---|---|
| **ರಾಜ್ಯ ವಲಯ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 23732.67 | 23444.67 | 23332.44 |
| ಆ) 4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 9982.92 | 9981.92 | 9981.92 |
| **ಒಟ್ಟು ರಾಜ್ಯ ವಲಯ** | **33715.59** | **33426.59** | **33314.36** |
| **ಜಿಲ್ಲಾ ಪಂಚಾಯತ್ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 3384.00 | 3681.22 | 3474.78 |
| **ಒಟ್ಟು** | **37099.59** | **37107.81** | **36789.14** |

**ಭೌತಿಕ ಪ್ರಗತಿ**

| | | ಗುರಿ | ಸಾಧನೆ |
|---|---|---|---|
| ಮೀನು ಉತ್ಪಾದನೆ | | | |
| ಒಳನಾಡು | ಲಕ್ಷ ಮೆ.ಟನ್ | 2.00 | 1.97 |
| ಕರಾವಳಿ | ಲಕ್ಷ ಮೆ.ಟನ್ | 4.10 | 3.89 |
| **ಒಟ್ಟು** | ಲಕ್ಷ ಮೆ.ಟನ್ | **6.10** | **5.85** |
| ಮೀನು ಮರಿ ಉತ್ಪಾದನೆ | | | |
| ಫ್ರೈ | ಮಿಲಿಯನ್ ಗಳಲ್ಲಿ | 700.00 | 629.80 |
| ಫಿಂಗರ್‌ಲಿಂಗ್ಸ್ | ಮಿಲಿಯನ್ ಗಳಲ್ಲಿ | 350.00 | 314.90 |

## 3. ಸಮುದ್ರ ಮೀನುಗಾರಿಕೆ

### 3.1 ಮೀನುಗಾರಿಕೆ ದೋಣಿಗಳಿಗೆ ಡೀಸೆಲ್–ಮಾರಾಟ ತೆರಿಗೆ ಮರುಪಾವತಿ (2405–00–103–0–23)

"ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ – ಮಾರಾಟ ತೆರಿಗೆ ಮರುಪಾವತಿ" ಯೋಜನೆಯಡಿ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ರಾಜ್ಯ ಮಾರಾಟ ಕರಕ್ಕೆ ಸಮನಾದ ಮೊತ್ತವನ್ನು ದೋಣಿಗಳ ಮಾಲೀಕರ ಬ್ಯಾಂಕ್ ಖಾತೆಗೆ ಸಹಾಯಧನವಾಗಿ ನೇರವಾಗಿ ವರ್ಗಾಯಿಸಿ ಮರುಪಾವತಿ ಮಾಡಲಾಗುತ್ತದೆ. ಈ ಉದ್ದೇಶಕ್ಕಾಗಿ ರೂ.13500.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ. 2018–19 ನೇ ಸಾಲಿನಲ್ಲಿ ರೂ.2780.00 ಲಕ್ಷಗಳ ಹೆಚ್ಚುವರಿ ಅನುದಾನ ಒದಗಿಸಲಾಗಿರುತ್ತದೆ. ಹೀಗೆ ಒದಗಿಸಿದ ಒಟ್ಟು ಅನುದಾನದಿಂದ ರೂ.1050.00 ಲಕ್ಷಗಳನ್ನು ಸಾಂಪ್ರದಾಯಿಕ ದೋಣಿಗಳಿಗೆ ಸೀಮೆ ಎಣ್ಣೆ ವಿತರಣೆಗೆ ವೆಚ್ಚ ಮಾಡಲಾಗಿದೆ, ರೂ.232.20 ಲಕ್ಷಗಳನ್ನು ನೀಲೀ ಕ್ರಾಂತಿ ಯೋಜನೆಗೆ, ರೂ.93.50 ಲಕ್ಷಗಳನ್ನು ಮಂಜುಗಡ್ಡೆ ಸ್ಥಾವರಗಳು ಬಳಸುವ ವದ್ಯುತ್ ಮೇಲೆ ಸಹಾಯಧನ ನೀಡಲು, ಹಾಗೂ ರೂ.10.00 ಲಕ್ಷಗಳನ್ನು ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಆಡಳಿತ ವೆಚ್ಚಗಳಿಗೆ ಪುನರ್‌ವಿನಿಯೋಗ ಮಾಡಲಾಗಿದೆ. ಡೀಸೆಲ್ ಮೇಲಿನ ಮಾರಾಟ 3632 ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ 1.499 ಲಕ್ಷ ಕಿಲೋ ಲೀಟರ್ ಡೀಸಲ್ ಒದಗಿಸಲಾಗಿದ್ದು, ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.14720.25 ಲಕ್ಷ ವೆಚ್ಚ ಮಾಡಲಾಗಿದೆ.

### 3.2 ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳ ಅಭಿವೃದ್ಧಿ ಮತ್ತು ನಿರ್ವಹಣೆ (2405–00–103–0–14):

ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನಿರ್ವಹಣೆ ಯೋಜನೆಯಲ್ಲಿನ ಅನುದಾನವನ್ನು ಮೀನುಗಾರಿಕೆ ಬಂದರುಗಳ ನಿರ್ವಹಣೆ, ಸ್ವಚ್ಛತೆ, ವಿದ್ಯುತ್, ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗೆ ಹಾಗೂ ಇತರೆ ದುರಸ್ತಿ ಕಾಮಗಾರಿಗೆ ಉಪಯೋಗಿಸಲು ಒದಗಿಸಲಾಗಿದೆ. 2018–19 ನೇ ಸಾಲಿನಲ್ಲಿ ರೂ.232.00 ಲಕ್ಷಗಳ ಅನುದಾನ ಒದಗಿಸಿದ್ದು ರೂ.222.53 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

### 3.3 ಸಾಂಪ್ರದಾಯಿಕ ದೋಣಿಗಳಿಗೆ ಸೀಮೆ ಎಣ್ಣೆ ಸರಬರಾಜು: (2405–00–103–0–17)

ಕರ್ನಾಟಕದ ಕರಾವಳಿಯಲ್ಲಿ ಬಹು ಸಂಖ್ಯೆಯ ನಾಡ ದೋಣಿಗಳು ಮೀನುಗಾರಿಕೆಯಲ್ಲಿ ತೊಡಗಿದ್ದು, ಹಂತ ಹಂತವಾಗಿ ಈ ನಾಡ ದೋಣಿಗಳು ಔಟ್‌ಬೋರ್ಡ್ ಇಂಜಿನ್‌ಗಳನ್ನು ಅಳವಡಿಸಿಕೊಂಡು ಸಮುದ್ರ ತೀರದಿಂದ ದೂರದವರೆಗೆ ಕ್ಷಿಪ್ರಕಾಲದಲ್ಲಿ ಮೀನುಗಾರಿಕೆಗೆ ತೆರಳಿ ಲಾಭದಾಯಕ ಮೀನುಗಾರಿಕೆ ಮಾಡಲು ಸಫಲವಾಗಿದೆ. ಈ ಮೋಟರೀಕೃತ ನಾಡ ದೋಣಿಗಳಿಗೆ ಬಹು ವರ್ಷಗಳಿಂದ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ವತಿಯಿಂದ ಪಡಿತರ ದರದಲ್ಲಿ ಪ್ರತಿ ಮಾಹೆಯಾನ ತಲಾ 300 ಲೀಟರ್ ಸೀಮೆ ಎಣ್ಣೆಯನ್ನು ಪ್ರತಿ ಬೋಟಿಗೆ ಪೂರೈಸಲಾಗುತ್ತಿತ್ತು. ಆದರೆ 2018–19 ನೇ ಸಾಲಿನಿಂದ ಮೀನುಗಾರಿಕೆ ಇಲಾಖೆಯಡಿ ಈ ಯೋಜನೆಗೆ ಅನುದಾನ ಒದಗಿಸಲಾಗುತ್ತಿದೆ. ಈ ಸಾಂಪ್ರದಾಯಿಕ ದೋಣಿಗಳಿಗೆ ಪಡಿತರ ದರದಲ್ಲಿ ಪ್ರತಿ ಮಾಹೆ 300 ಲೀಟರ್ ಸೀಮೆ ಏಣ್ಣೆಯನ್ನು ಪ್ರತಿ ಬೋಟಿಗೆ ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಅನುದಾನ ಒದಗಿಸುವ ಮುನ್ನ ಈ ಯೋಜನೆಗೆ ರೂ.1050.00 ಲಕ್ಷಗಳನ್ನು "ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ – ಮಾರಾಟ ತೆರಿಗೆ ಮರುಪಾವತಿ" ಯೋಜನೆಯಿಂದ ಭರಿಸಲಾಗಿದೆ. ತದನಂತರ ರೂ.857.98 ಲಕ್ಷಗಳನ್ನು ಈ ಯೋಜನೆಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿ ಒಟ್ಟು ರೂ.1907.98 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಕರಾವಳಿಯಲ್ಲಿ ಪರ್ಮಿಟ್ ಪಡೆದ 4514 ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ಮಾಸಿಕ 1355 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರ ದರದಲ್ಲಿ ನೀಡಲಾಗುತ್ತಿದೆ.

### 3.4 ಮೀನುಗಾರಿಕೆ ಬಂದರುಗಳು – ಕೇಂದ್ರ ಪುರಸ್ಕೃತ ಯೋಜನೆ (4405–00–103–6–01):

ರೂ.57.60 ಕೋಟಿ ಅಂದಾಜು ವೆಚ್ಚದ ಮಂಗಳೂರು 3ನೇ ಹಂತ, ರೂ.37.15 ಕೋಟಿ ಅಂದಾಜು ವೆಚ್ಚದ ಮಲ್ಪೆ 3ನೇ ಹಂತ ಮತ್ತು ರೂ.26.98 ಕೋಟಿ ಅಂದಾಜು ವೆಚ್ಚದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ

ಮೀನುಗಾರಿಕೆ ಬಂದರಿನ ಎರಡನೇ ಹಂತ, ರೂ.102.11 ಕೋಟಿ ಅಂದಾಜು ವೆಚ್ಚದ ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಮಂಜೂರಾತಿ ಪಡೆದು ಕಾಮಗಾರಿಗಳು ಮುಕ್ತಾಯ ಹಂತದಲ್ಲಿದೆ.

ಕುಳಾಯಿಯಲ್ಲಿ ಶಿಪ್ಪಿಂಗ್ ಮಂತ್ರಾಲಯ (50%), ನವ ಮಂಗಳೂರು ಪೋರ್ಟ್ ಟ್ರಸ್ಟ್ (45%) ಮತ್ತು ರಾಜ್ಯ ಸರ್ಕಾರದ (5%) ಆರ್ಥಿಕ ನೆರವಿನೊಂದಿಗೆ ಮೀನುಗಾರಿಕೆ ಬಂದರಿನ ನಿರ್ಮಾಣವನ್ನು ರೂ.196.51 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಕೇಂದ್ರ ಸರ್ಕಾರದ ಮಂಜೂರಾತಿ ನೀಡಿದೆ. ಕೇಂದ್ರ ಸರ್ಕಾರವು ರೂ.49.13 ಕೋಟಿ ಬಿಡುಗಡೆಗೊಳಿಸಲಾಗಿದೆ. ಸದರಿ ಮೊತ್ತಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.4.91 ಕೋಟಿ ಸೇರಿ ಹೀಗೆ ಒಟ್ಟು ರೂ.54.04 ಕೋಟಿಗಳನ್ನು ನವ ಮಂಗಳೂರು ಪೋರ್ಟ್ ಟ್ರಸ್ಟ್ ಇವರಿಗೆ ಬಿಡುಗಡೆಗೊಳಿಸಲಾಗಿದೆ.

ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕೆ ಬಂದರನ್ನು ರೂ.138.60 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಕೇಂದ್ರ ಸರ್ಕಾರದ ಮಂಜೂರಾತಿ ನೀಡಿದ್ದು, ಪ್ರಥಮ ಕಂತಿನ ಅನುದಾನ ರೂ.13.86 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಅಳ್ವೆಕೋಡಿ–ತೆಂಗಿನಗುಂಡಿ ಇಳಿದಾಣ ಕೇಂದ್ರದ ಅಲೆತಡೆಗೋಡೆ ನಿರ್ಮಾಣವನ್ನು ರೂ.86.08 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ರಾಜ್ಯ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಮುಂದುವರೆದು ಕೇಂದ್ರ ಸರ್ಕಾರವು ಸದರಿ ಯೋಜನೆಗೆ ಶೇ.50 ರಷ್ಟು ನೆರವು ನೀಡಲು ಕೇಂದ್ರ ಸರ್ಕಾರದ ಯೋಜನಾ ಮಂಜೂರಾತಿ ಸಮಿತಿಯಲ್ಲಿ ಸಹಮತಿ ನೀಡಲಾಗಿದೆ.

ಕೇಂದ್ರ ಸರ್ಕಾರವು ಮಂಗಳೂರು ಮೀನುಗಾರಿಕೆ ಬಂದರುಗಳ ಕಾಮಗಾರಿಗಳಿಗೆ ರೂ.1510.00 ಲಕ್ಷ, ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿಗಳಿಗೆ ರೂ.2200.00, ಕುಳಾಯಿ ಮೀನುಗಾರಿಕೆ ಬಂದರಿನ ಕಾಮಗಾರಿಗಳಿಗೆ ರೂ.2021.50 ಲಕ್ಷ ಹಾಗೂ ಹೆಜಮಾಡಿ ಮೀನುಗಾರಿಕೆ ಬಂದರಿನ ನಿರ್ಮಾಣ ಕಾಮಗಾರಿಗಳಿಗೆ ರೂ.1386.00 ಲಕ್ಷ ಬಿಡುಗಡೆಗೊಳಿಸಲಾಗಿದೆ 2018–19 ನೇ ಸಾಲಿನಲ್ಲಿ ಈ ಯೋಜನೆಯಡಿ ಒಟ್ಟು ರೂ.7117.50 ಲಕ್ಷ ಕೇಂದ್ರದಿಂದ ಬಿಡುಗಡೆ ಮಾಡಲಾಗಿದೆ.

2018–19 ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ರೂ.1.00 ಲಕ್ಷಗಳ ಆಂಶಿಕ ಅನುದಾನ ಒದಗಿಸಲಾಗಿತ್ತು. ಹೆಚ್ಚುವರಿ ಅನುದಾನ ರೂ.7073.92 ಸೇರಿ ರೂ.7074.92 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತದಲ್ಲಿ ರೂ.1670.92 ಲಕ್ಷಗಳನ್ನು ಗಂಗೊಳ್ಳಿ ಮೀನುಗಾರಿಕೆ ಬಂದರಿನ ಬ್ರೇಕ್ ವಾಟರ್ ನಿರ್ಮಾಣ ಕಾಮಗಾರಿಗಳಿಗೆ ಹಾಗೂ ರೂ.5404.00 ಲಕ್ಷಗಳನ್ನು ಕುಳಾಯಿ ಮೀನುಗಾರಿಕೆ ಬಂದರಿನ ನಿರ್ಮಾಣ ಕಾಮಗಾರಿಗಳಿಗೆ ನವ ಮಂಗಳೂರು ಪೋರ್ಟ್ ಟ್ರಸ್ಟ್‌ಗೆ ಬಿಡುಗಡೆ ಮಾಡಲಾಗಿದೆ.

**3.5 ಮೀನುಗಾರಿಕೆ ಇಳಿದಾಣ ಮತ್ತು ತಂಗುದಾಣಗಳು (4405–00–104–0–02):**

- ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಶಿರೂರು ಅಳ್ವೆಗದ್ದೆಯಲ್ಲಿ ರೂ.980.00 ಲಕ್ಷಗಳ ವೆಚ್ಚದಲ್ಲಿ ತಡೆಗೋಡೆ, ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮರವಂತೆಯಲ್ಲಿ ರೂ.4500.00 ಲಕ್ಷಗಳ ವೆಚ್ಚದಲ್ಲಿ ಕೇರಳ ಮಾದರಿಯ ಬಾಹ್ಯ ಬಂದರು ನಿರ್ಮಾಣ, ಕೊಡೇರಿಯಲ್ಲಿ ರೂ.3300.00 ಲಕ್ಷ ವೆಚ್ಚದಲ್ಲಿ ತಡೆಗೋಡೆ ನಿರ್ಮಾಣ, ತೆಂಗಿನಗುಂಡಿಯಲ್ಲಿ ರೂ. 1000.00 ಲಕ್ಷಗಳಲ್ಲಿ ಮೀನುಗಾರಿಕೆ ಇಳಿದಾಣ ಕೇಂದ್ರದ ಧಕ್ಕೆ ವಿಸ್ತರಣೆ, ಕುಂದಾಪುರ ಕೋಡಿಯಲ್ಲಿ ರೂ. 400.00 ಲಕ್ಷ ವೆಚ್ಚದಲ್ಲಿ ಧಕ್ಕೆ ವಿಸ್ತರಣೆ ಮತ್ತು ಅಳ್ವೆಕೋಡಿಯಲ್ಲಿ ರೂ.500.00 ಲಕ್ಷ ವೆಚ್ಚದಲ್ಲಿ ಧಕ್ಕೆ ವಿಸ್ತರಣೆ ಕಾಮಗಾರಿ ಪ್ರಗತಿಯಲ್ಲಿದೆ.

- ಮಲ್ಪೆ ಮೀನುಗಾರಿಕೆ ಬಂದರಿನಲ್ಲಿ 75ಮೀ ಜೆಟ್ಟಿ ವಿಸ್ತರಣೆ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.5.00 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, ಕಾಮಗಾರಿ ಪೂರ್ಣಗೊಂಡಿದೆ.

- ಭಟ್ಕಳ ಮೀನುಗಾರಿಕೆ ಬಂದರಿನ ಬಳಿ ಬ್ರೇಕ್ ವಾಟರ್ ಮರು ನಿರ್ಮಾಣ ಕಾಮಗಾರಿಯನ್ನು ರೂ.5.00 ಕೋಟಿ ಅಂದಾಜು ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

- ಹೊನ್ನಾವರದ ಅಳಿವೆಯಲ್ಲಿ ರೂ.4.00 ಕೋಟಿ ಅಂದಾಜು ವೆಚ್ಚದಲ್ಲಿ ಹೂಳೆತ್ತುವ ಕಾಮಗಾರಿ ಪೂರ್ಣಗೊಳಿಸುವ ಹಂತದಲ್ಲಿದೆ.

ಇದಲ್ಲದೆ 2018–19 ನೇ ಸಾಲಿನಲ್ಲಿ ತದಡಿ ಮೀನುಗಾರಿಕೆ ಬಂದರಿನ ಅಭಿವೃದ್ಧಿಗೆ ಅವಶ್ಯವಿರುವ ವಿವಿಧ ಕಾಮಗಾರಿಗಳನ್ನು ರೂ.1.79 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಆಮದಳ್ಳಿ ಮೀನುಗಾರಿಕೆ ಬಂದರಿನ ಕಾಮಗಾರಿಗಳನ್ನು ರೂ.1874.00 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಈ ಯೋಜನೆಯಡಿ ಆಯವ್ಯಯದಲ್ಲಿ ರೂ.1254.00 ಲಕ್ಷಗಳ ಅನುದಾನ ಒದಗಿಸಲಾಗಿದೆ. ಮುಂದುವರೆದ ಕಾಮಗಾರಿಗಳಿಗೆ ಪೂರ್ಣ ಅನುದಾನ ವೆಚ್ಚ ಮಾಡಲಾಗಿದೆ.

### 3.6 ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಧಿ ಯೋಜನೆ (4405–00–800–2–03):

ನಬಾರ್ಡ್ ನೆರವಿನ ಆರ್.ಐ.ಡಿ.ಎಫ್ ಯೋಜನೆಯಡಿ ಆರ್.ಐ.ಡಿ.ಎಫ್ 19, 20, 21, 22, 23 ಮತ್ತು 24 ರಲ್ಲಿ ಮಂಜೂರಾದ 69 ಕಾಮಗಾರಿಗಳಿಗೆ ರೂ.16.53 ಕೋಟಿ ವೆಚ್ಚ ಮಾಡಲಾಗಿದೆ.

ಆರ್.ಐ.ಡಿ.ಎಫ್ 24 ರಡಿ ಮೀನುಗಾರಿಕೆ ಅಭಿವೃದ್ಧಿಗಾಗಿ 16 ಕಾಮಗಾರಿಗಳನ್ನು ರೂ.25.77 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಮೀನುಗಾರಿಕೆ ಇಲಾಖೆಯ 8 ಮೀನು ಮರಿ ಫಾರಂ (ರೂ.15.09 ಕೋಟಿ), 5 ನಿರ್ಮಲ ಮೀನು ಮಾರುಕಟ್ಟೆಗಳನ್ನು (ರೂ.5.00 ಕೋಟಿ), ಉಡುಪಿ ಜಿಲ್ಲಯ ಬೊಬ್ಬರ್ಯ ಪಾದೆ ಜೆಟ್ಟಿ ವಿಸ್ತರಣೆ (ರೂ.1.30 ಕೋಟಿ), ಮಂಗಳೂರು ತಾಲ್ಲೂಕಿನ ತೋಟ ಬೇಂಗ್ರೆಯಲ್ಲಿ ನಾಡ ತಂಗುದಾಣ ನಿರ್ಮಾಣ (ರೂ.3.37 ಕೋಟಿ) ಹಾಗೂ ಹಂಗಾರಕಟ್ಟೆಯಲ್ಲಿ ಹರಾಜು ಪ್ರಾಂಗಣ ನಿರ್ಮಾಣ (ರೂ.1.01 ಕೋಟಿ) ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ. 2018–19 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ರೂ.1653.00 ಲಕ್ಷಗಳನ್ನು ಪೂರ್ಣವಾಗಿ ವೆಚ್ಚ ಮಾಡಲಾಗಿದೆ.

### 3.7 ಮೀನುಗಾರಿಕೆ ಬಂದರುಗಳಲ್ಲಿ ಹೂಳೆತ್ತುವಿಕೆ–ಕೇಂದ್ರ ಪುರಸ್ಕೃತ ಯೋಜನೆ(4405–00–103–1–02):

ರಾಜ್ಯದಲ್ಲಿ ಕೇಂದ್ರದ ನೆರವಿನೊಂದಿಗೆ ಹಾಗೂ ರಾಜ್ಯ ಯೋಜನೆಗಳಡಿಯಲ್ಲಿ ನಿರ್ಮಿಸಿರುವ ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿನ ಹೂಳಿನ ಸಮಸ್ಯೆಯನ್ನು ಬಗೆಹರಿಸಲು ಹೂಳೆತ್ತುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೋಡಿಕನ್ಯಾನದಲ್ಲಿ ರೂ.646.00 ಲಕ್ಷ ಅಂದಾಜು ವೆಚ್ಚದಲ್ಲಿ, ಮಲ್ಪೆ ಬೇಸಿನ್ ನಲ್ಲಿ ರೂ.225.00 ಲಕ್ಷ ವೆಚ್ಚದಲ್ಲಿ, ಬೇಲೀಕೇರಿಯಲ್ಲಿ ರೂ.300.00 ಲಕ್ಷ ಅಂದಾಜು ವೆಚ್ಚದಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಕೈಗೊಂಡಿದ್ದು, ಪ್ರಗತಿಯಲ್ಲಿದೆ.

2018–19 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.1.00 ಲಕ್ಷ ಆಂಶಿಕ ಅನುದಾನ ಒದಗಿಸಲಾಗಿದೆ. ಕೇಂದ್ರದಿಂದ ಅನುದಾನ ಬಿಡುಗಡೆಯಾಗದ ಕಾರಣ ವೆಚ್ಚ ಇರುವುದಿಲ್ಲ.

### 3.8 ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ (2405–00–110–0–03)

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳಿಗೆ ಉಪಯೋಗಿಸಿದ ವಿದ್ಯುತ್ ಯೂನಿಟ್‌ಗೆ ರೂ.1.75 ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.3.50 ಲಕ್ಷದಂತೆ ಸಹಾಯಧನ ನೀಡಲು ಅವಕಾಶವಿರುತ್ತದೆ.

2018–19 ನೇ ಸಾಲಿನಲ್ಲಿ ರೂ.400.00 ಲಕ್ಷ ಅನುದಾನ ಒದಗಿಸಲಾಗಿದ್ದು, ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ – ಮಾರಾಟ ತೆರಿಗೆ ಮರುಪಾವತಿ ಯೋಜನೆಯಿಂದ ರೂ.93.50 ಲಕ್ಷ ಮರಿಹೊಂದಾಣಿಕೆ ಮಾಡಿ ಒಟ್ಟು ಅನುದಾನ ರೂ.493.50 ಲಕ್ಷಗಳಲ್ಲಿ ರೂ.493.30 ಲಕ್ಷಗಳನ್ನು ಸಹಾಯಧನವಾಗಿ 184 ಮಂಜುಗಡ್ಡೆ ಸ್ಥಾವರಗಳಿಗೆ ನೀಡಲಾಗಿದೆ.

**3.9 ಕರಾವಳಿ ಕೊಂಡಿ ರಸ್ತೆಗಳ ನಿರ್ವಹಣೆ (2405–00–337–0–01)**

ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಒಟ್ಟು 355.13 ಕಿಮೀ ಉದ್ದದ 218 ಮೀನುಗಾರಿಕೆ ಕೊಂಡಿ ರಸ್ತೆಗಳಿರುತ್ತವೆ. ಸದರಿ ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿ, ಅಭಿವೃದ್ಧಿ ಮತ್ತು ನಿರ್ವಹಣೆಗೆ 2018–19 ನೇ ಸಾಲಿನಲ್ಲಿ ರೂ.300.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ. 98 ರಸ್ತೆಗಳ ಅಭಿವೃದ್ಧಿಗಾಗಿ ಅನುದಾನ ರೂ.299.94 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**4. ಒಳನಾಡು ಮೀನುಗಾರಿಕೆ:**

2018–19 ರಲ್ಲಿ ಇಲಾಖೆಯ ಮೀನುಮರಿ ಉತ್ಪಾದನಾ ಕೇಂದ್ರಗಳಲ್ಲಿ 6298.01 ಲಕ್ಷ ಫ್ರೈ ಮೀನು ಮರಿಗಳ ಉತ್ಪಾದನೆ ಮಾಡಲಾಗಿದೆ. 2791 ಇಲಾಖೆ ಕೆರೆಗಳಲ್ಲಿ 1768.00 ಲಕ್ಷ ಮೀನು ಮರಿಗಳನ್ನು ಮತ್ತು 1734 ಗ್ರಾಮ ಪಂಚಾಯತಿ ಕೆರೆಗಳಲ್ಲಿ 410.00 ಲಕ್ಷ ಮೀನು ಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ. ಸದರಿ ಸಾಲಿನಲ್ಲಿ 1.97 ಲಕ್ಷ ಮೆಟ್ರಿಕ್ ಟನ್ ಒಳನಾಡು ಮೀನು ಉತ್ಪಾದನೆಯಾಗಿದೆ ಎಂದು ಅಂದಾಜಿಸಲಾಗಿದೆ.

**4.1 ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ (2405–00–101–0–03):**

ಈ ಯೋಜನೆಯಡಿ ನೀಡಲಾಗಿರುವ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ಫಾರಂಗಳಲ್ಲಿ ಹಾಗೂ ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ ಮೀನುಮರಿ ಪಾಲನೆಗೆ ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನು ಮರಿ ಸಾಗಾಣಿಕೆ ವಾಹನಗಳ ಖರೀದಿ, ಮೀನು ಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ನಿರ್ವಹಣೆ ಮತ್ತು ಸಿಬ್ಬಂದಿ ವೆಚ್ಚಗಳಿಗೆ ವಿನಿಯೋಗಿಸಲಾಗುತ್ತಿದೆ.

"ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲಾಗುವುದು. ಈ ಯೋಜನೆಯಡಿ 80 ಕೆರೆಗಳಲ್ಲಿ ಮೀನು ಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಯಡಿ ರೂ.149.44 ಲಕ್ಷ ವೆಚ್ಚ ಮಾಡಲಾಗಿದೆ.

ರಾಜ್ಯದ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಗೆ ಮಂಜೂರಾತಿ ಪಡೆಯಲಾಗಿದೆ. ಅನುದಾನ ಬಿಡುಗಡೆಯಾಗದ ಕಾರಣ ಯೋಜನೆ ಅನುಷ್ಠಾನವಾಗಿರುವುದಿಲ್ಲ.

2018–19 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.766.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ. ಸದರಿ ಯೋಜನೆಯಡಿ ಆಡಳಿತ ವೆಚ್ಚಗಳಿಗಾಗಿ ರೂ.10.00 ಲಕ್ಷಗಳನ್ನು "ಮೀನುಗಾರಿಕೆ ದೋಣಿಗಳಿಗೆ ಡೀಸೆಲ್– ಮಾರಾಟ ತೆರಿಗೆ ಮರುಪಾವತಿ" ಯೋಜನೆಯಿಂದ ಮರುಹೊಂದಾಣಿಕೆ ಮಾಡಿ ಒಟ್ಟು ಅನುದಾನ ರೂ.776.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ. ಸದರಿ ಯೋಜನೆಯಡಿಯಲ್ಲಿಯೇ ಹೊರ ಗುತ್ತಿಗೆದಾರರಿಗೆ ವೇತನ ಪಾವತಿಸಲು "ಮತ್ಸ್ಯ ಕೃಷಿ ಆಶಾ ಕಿರಣ" ಘಟಕದಿಂದ ರೂ.50.00 ಲಕ್ಷಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. ಈ ಯೋಜನೆಯಡಿ ಒಟ್ಟು ರೂ.813.05 ಲಕ್ಷ ವೆಚ್ಚ ಮಾಡಲಾಗಿದೆ.

### 4.2 ಮೀನುಮರಿ ಖರೀದಿಗೆ ಸಹಾಯಧನ (2405–00–101–0–28)

ಈ ಯೋಜನೆಯಡಿ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/– ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/– ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಆಸಕ್ತರಿರುವ ಮೀನು ಕೃಷಿಕರು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. 2018–19ನೇ ಸಾಲಿನಲ್ಲಿ ರೂ.10.00 ಲಕ್ಷ ಅನುದಾನವನ್ನು ಒದಗಿಸಿದ್ದು, ರೂ.9.95 ಲಕ್ಷಗಳನ್ನು ಸಹಾಯಧನವಾಗಿ ನೀಡಲಾಗಿದೆ. 208 ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.

### 4.3 ಜಲಾಶಯದಲ್ಲಿ ಮೀನು ಮರಿ ಬಿತ್ತನೆ (2405–00–101–0–54)

ರಾಜ್ಯದಲ್ಲಿ ಒಟ್ಟು 82 ಜಲಾಶಯಗಳಿವೆ. ಈ ಜಲಾಶಯಗಳ ಒಟ್ಟು ಜಲ ವಿಸ್ತೀರ್ಣ 2.72 ಲಕ್ಷ ಹೆಕ್ಟೇರ್‌ಗಳಾಗಿರುತ್ತದೆ. ಜಲಾಶಯಗಳನ್ನೆ ತಮ್ಮ ಜೀವನೋಪಾಯಕ್ಕೆ ನಂಬಿರುವ ಸಾವಿರಾರು ಮೀನುಗಾರರ ಕುಟುಂಬಗಳಿವೆ. ಇತ್ತೀಚಿನ ದಿನಗಳಲ್ಲಿ ನದಿಗಳಲ್ಲಿ ಮತ್ತು ಹಲವಾರು ಜಲಾಶಯಗಳಲ್ಲಿ ಮತ್ಸ್ಯ ಸಂಪನ್ಮೂಲಗಳು ಕ್ಷೀಣಿಸಿದ್ದು ಹೆಚ್ಚಿನ ಮೀನು ಶಿಕಾರಿಯಾಗದೆ ಇದನ್ನೇ ಅವಲಂಬಿಸಿರುವ ಮೀನುಗಾರರು ಸಂಕಷ್ಟದಲ್ಲಿದ್ದಾರೆ. ಜಲಾಶಯಗಳಲ್ಲಿ ಶೀಘ್ರವಾಗಿ ಬೆಳೆಯುವ ಭಾರತದ ದೊಡ್ಡಗೆಂಡೆ ಮೀನುಗಳಾದ ಕಾಟ್ಲಾ, ರೋಹು, ಮೃಗಾಲ ತಳಿಗಳು ದಕ್ಷಿಣ ಭಾರತದ ಜಲಸಂಪನ್ಮೂಲಗಳಲ್ಲಿ ಸ್ವಾಭಾವಿಕವಾಗಿ ಉತ್ಪಾದನೆಯಾಗುವುದಿಲ್ಲವಾದ್ದರಿಂದ ಅವುಗಳನ್ನು ಆಗಿಂದಾಗ್ಗೆ ದಾಸ್ತಾನು ಮಾಡುವ ಮೂಲಕ ಸದರಿ ಸಂಪನ್ಮೂಲಗಳಲ್ಲಿ ಮತ್ಸ್ಯ ಸಂಪನ್ಮೂಲ ವೃದ್ಧಿಗೊಳಿಸುವುದು ಅತ್ಯಗತ್ಯವಾಗಿದೆ.

ಈ ಯೋಜನೆಯಡಿ ರಾಜ್ಯದ ಆಯ್ದ ಜಲಾಶಯಗಳಲ್ಲಿ ಬಲಿತ ಮೀನು ಮರಿಗಳ ಬಿತ್ತನೆ ಮಾಡಿ ಜಲಾಶಯಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತದೆ. 2018–19 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.50.00 ಲಕ್ಷಗಳನ್ನು ಒದಗಿಸಲಾಗಿದ್ದು, ಪೂರ್ಣ ಅನುದಾನವನ್ನು ವೆಚ್ಚ ಮಾಡಲಾಗಿದೆ. 50 ಲಕ್ಷ ಬಿತ್ತನೆ ಮೀನು ಮರಿಗಳನ್ನು ಆಯ್ದ 3 ಜಲಾಶಯಗಳಲ್ಲಿ ಬಿತ್ತನೆ ಮಾಡಲಾಗಿದೆ.

### 4.4 ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ (2405–00–101–0–56)

ಮೀನುಗಾರರ ಶ್ರೇಯೋಭಿವೃದ್ಧಿ ಮತ್ತು ಅವರ ಜೀವರಕ್ಷಣೆಯ ದೃಷ್ಠಿಯಿಂದ ಮೀನುಗಾರಿಕೆ ಇಲಾಖೆಯು "ಒಳನಾಡು ಮೀನುಗಾರರಿಗೆ ಫೈಬರ್‌ಗ್ಲಾಸ್ ಹರಿಗೋಲುಗಳ ವಿತರಣೆ" ಎಂಬ ಕಾರ್ಯಕ್ರಮವನ್ನು ರೂಪಿಸಿದೆ. ಫೈಬರ್‌ಗ್ಲಾಸ್ ಹರಿಗೋಲುಗಳು ಸದೃಢವಾಗಿದ್ದು ಮೀನುಗಾರರು ಆಳನೀರಿನಲ್ಲಿ ಮೀನುಗಾರಿಕೆಯಲ್ಲಿ ತೊಡಗಲು ಹಾಗೂ ಜೀವ ರಕ್ಷಣೆ ದೃಷ್ಟಿಯಿಂದ ಸಹಕಾರಿಯಾಗಿರುವುದಲ್ಲದೆ ದೀರ್ಘ ಬಾಳಿಕೆಯನ್ನು ನೀಡುತ್ತವೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಒಳನಾಡು ಪ್ರದೇಶಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದ್ರಿ ಯೋಜನೆಯಡಿ ತಲಾ ಒಂದು ಫೈಬರ್‌ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ರೂ.10,000/– ಘಟಕ ವೆಚ್ಚದಲ್ಲಿ ನೀಡಲು ಅವಕಾಶ ಮಾಡಲಾಗಿದೆ. 2018–19 ನೇ ಸಾಲಿನಲ್ಲಿ ಈ ಯೋಜನೆಗೆ ರೂ.40.00 ಲಕ್ಷ ಅನುದಾನ ಒದಗಿಸಲಾಗಿದ್ದು, 400 ಮೀನುಗಾರರಿಗೆ ಸೌಲಭ್ಯ ನೀಡಲು ರೂ.39.63 ಲಕ್ಷ ವೆಚ್ಚ ಮಾಡಲಾಗಿದೆ.

### 4.5 ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ ಸ್ಥಾಪನೆ (2405–00–101–0–67)

ಉತ್ತರ ಕರ್ನಾಟಕದಲ್ಲಿ ಸುಮಾರು 1.64 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಜಲಾಶಯಗಳು 42,195 ಹೆಕ್ಟೇರ್ ವಿಸ್ತೀರ್ಣದ ದೊಡ್ಡಕೆರೆಗಳು, 20667 ಹೆಕ್ಟೇರ್ ವಿಸ್ತೀರ್ಣದ ಗ್ರಾಮ ಪಂಚಾಯತ್ ಕೆರೆಗಳು, ನದಿಗಳು ಮತ್ತು ಕಾಲುವೆಗಳಿದ್ದು, ಒಳನಾಡು ಮೀನುಗಾರಿಕೆ ಅಭಿವೃದ್ದಿಗೆ ವಿಫುಲ ಅವಕಾಶವನ್ನು ನೀಡುತ್ತವೆ. ಈ ಹಿನ್ನೆಲೆಯಲ್ಲಿ ಇಲಾಖೆಯ ಅಧಿಕಾರಿಗಳನ್ನೊಳಗೊಂಡ "ನಿಜ ಶರಣ ಅಂಬಿಗರ ಚೌಡಯ್ಯ ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ" ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯ ಮುಖ್ಯ ಉದ್ದೇಶಗಳೆಂದರೆ:

ಉತ್ತರ ಕರ್ನಾಟಕದ ಸಮಗ್ರ ಮೀನುಗಾರಿಕೆ ಅಭಿವೃದ್ಧಿಗೆ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುವುದು, ಅಗತ್ಯ ಯೋಜನಾ ವರದಿ ಸಿದ್ಧಪಡಿಸಿ ವಿವಿಧ ಮೂಲಗಳಿಂದ ಮೀನುಗಾರಿಕೆ ಚಟುವಟಿಕೆಗಳಿಗೆ ಅನುದಾನವನ್ನು ಪಡೆದು ಕಾರ್ಯಕ್ರಮ ಅನುಷ್ಠಾನಗೊಳಿಸುವುದು ಮತ್ತು ಮೀನುಗಾರಿಕೆ ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಅಭಿವೃದ್ಧಿಯಲ್ಲಿ ನಿರತರಾಗಿರುವ ಸಂಸ್ಥೆಗಳು ಹಾಗೂ ಮೀನುಗಾರರ ಸಂಘಟನೆಗಳ ಸಹಯೋಗದೊಂದಿಗೆ ಉತ್ತರ ಕರ್ನಾಟಕದ ಮೀನುಗಾರಿಕೆ ಮತ್ತು ಮೀನು ಕೃಷಿ ಅಭಿವೃದ್ಧಿಗೆ ಕ್ರಮವಹಿಸುವುದು.

2018–19 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.1.00 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.0.75 ಲಕ್ಷ ವೆಚ್ಚ ಮಾಡಲಾಗಿದೆ.

### 4.6 ಕ್ಲಸ್ಟರ್ ಮಾದರಿಯಲ್ಲಿ ಮೀನುಗಾರಿಕೆ ಅಭಿವೃದ್ಧಿ (2405–00–101–0–68)

ಕ್ಲಸ್ಟರ್ ಮಾದರಿಯಲ್ಲಿ ಆಯ್ದ 14 ತಾಲ್ಲೂಕುಗಳಲ್ಲಿ ಸಮಗ್ರವಾಗಿ ಮತ್ತು ಸುಸಂಘಟಿತ ಮಾದರಿಯಲ್ಲಿ ಮೀನು ಕೃಷಿಯ ಅಭಿವೃದ್ಧಿಯನ್ನು ಕೈಗೊಳ್ಳುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯಡಿ ಕೃಷಿಕರಿಗೆ ಮೀನು ಸಾಕಾಣಿಕೆ ಕೊಳ ಮತ್ತು ಇತರೆ ಮೂಲಭೂತ ಸೌಕರ್ಯಗಳ ಸೃಷ್ಟಿಗೆ ಸಹಾಯಧನ ನೀಡಲಾಗುವುದು. ಕ್ಲಸ ರ್ ಪ್ರದೇಶದಲ್ಲಿ ಕೃಷಿಗೆ ಅನುಪಯುಕ್ತವಾಗಿರುವ ಜೌಗು–ಚೌಳು ಪ್ರದೇಶಗಳಲ್ಲಿ ಮೀನು ಸಾಕಾಣಿಕೆಗೆ ಆದ್ಯತೆ ನೀಡಲಾಗುವುದು. 2018–19 ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.20.00 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.19.88 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 7.79 ಹೆಕ್ಟೇರ್ ಪ್ರದೇಶದಲ್ಲಿ ಕೊಳ ನಿರ್ಮಿಸಿ ಮೀನು ಕೃಷಿ ಕೈಗೊಳ್ಳಲು ಸಹಾಯಧನ ನೀಡಲಾಗಿದೆ.

### 4.7 ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ (2405–00–110–0–02)

"ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ" ಎಂಬ ಯೋಜನೆಯಡಿ ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಒಟ್ಟು ರೂ.10,000/– ಮೌಲ್ಯದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಶೇಕಡ 100ರಷ್ಟು ಸಹಾಯಧನ ನೀಡಲಾಗುವುದು. ಅನುದಾನ ರೂ.50.00 ಲಕ್ಷಗಳಾಗಿರುತ್ತದೆ.

2018–19 ನೇ ಸಾಲಿನಲ್ಲಿ ಈ ಯೋಜನೆಯಡಿ "ಟ್ರಾಲ್ ದೋಣಿಗಳ ಟ್ರಾಲ್ ಬಲೆಗಳಿಗೆ ಚೌಕಾಕಾರದ ಕಾಡ್ ಎಂಡ್ ಬಲೆಗಳನ್ನು ಉಚಿತ ವಿತರಣೆ" ಎಂಬ ಹೊಸ ಘಟಕವನ್ನು ಜಾರಿಗೆ ತರಲಾಗಿದೆ. ಸಮುದ್ರದಲ್ಲಿ ಮೀನು ಮರಿಗಳನ್ನು ಹಿಡಿಯುವುದನ್ನು ತಪ್ಪಿಸಿ ಮತ್ಸ್ಯ ಸಂಪತ್ತನ್ನು ರಕ್ಷಿಸಲು ಮೀನುಗಾರರಿಗೆ ಕಾಡ್ ಎಂಡ್‌ನಲ್ಲಿ 35 ಎಂಎಂ ಸ್ಕ್ವೇರ್ ಮೆಶ್ ಬಲೆಗಳನ್ನು ಅಳವಡಿಸಲು ತಲಾ 10,000/– ಮೌಲ್ಯದ ಬಲೆಗಳನ್ನು ಉಚಿತವಾಗಿ ವಿತರಿದುವುದು ಈ ಘಟಕದ ಉದ್ದೇಶ. ಅನುದಾನ ರೂ.250.00 ಲಕ್ಷಗಳಾಗಿರುತ್ತದೆ.

2018–19 ನೇ ಸಾಲಿನಲ್ಲಿ ರೂ.300.00 ಲಕ್ಷಗಳ ಅನುದಾನವನ್ನು ಈ ಯೋಜನೆಗೆ ಒದಗಿಸಲಾಗಿದ್ದು 500 ಫಲಾನುಭವಿಗಳಿಗೆ ಸಲಕರಣೆ ಕಿಟ್‌ಗಳನ್ನು ಹಾಗೂ 2500 ಟ್ರಾಲ್ ದೋಣಿಗಳಿಗೆ ಕಾಡ್ ಎಂಡ್ ಬಲೆಗಳನ್ನು ವಿತರಿಸಲು ರೂ.299.38 ಲಕ್ಷ ವೆಚ್ಚ ಮಾಡಲಾಗಿದೆ.

## 5. ಮೀನುಗಾರರ ಕಲ್ಯಾಣ ಯೋಜನೆಗಳು:

### 5.1 ಸಂಕಷ್ಟ ಪರಿಹಾರ ನಿಧಿ (2405–00–103–0–15):

ಸಂಕಷ್ಟ ಪರಿಹಾರ ನಿಧಿಗೆ ಸರ್ಕಾರದಿಂದ ಮೂಲ ಬಂಡವಾಳ ನೀಡುವ ಸಲುವಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಆವಲಂಬಿತರಿಗೆ ರೂ.3,00,000/– ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1,00,000 ಗಳ ಪರಿಹಾರ ನೀಡಲು ಹಾಗೂ ಬಲೆಹಾನಿ, ದೋಣಿಹಾನಿ ವೆಚ್ಚಗಳಿಗೆ

ಮತ್ತು ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.1,00,000/– ನೆರವು ನೀಡಲು ಅವಕಾಶವಿದೆ. ಸಮುದ್ರದಲ್ಲಿ ಮೀನುಗಾರಿಕೆ ಮಾಡುವಾಗ ಪ್ರಕೃತಿ ವಿಕೋಪದಿಂದ ದೋಣಿ ಅವಘಡದಿಂದ ಮೃತರಾದ ಮೀನುಗಾರರ ಕುಟುಂಬದವರಿಗೆ ರೂ.6.00 ಲಕ್ಷ ಪರಿಹಾರ ನೀಡಲಾಗುವುದು.

2018–19 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.1.00 ಲಕ್ಷ ನಿಧಿಗೆ ಪಾವತಿಸಲಾಗಿದೆ. 82 ಪ್ರಕರಣಗಳನ್ನು (ಮರಣ: 58 ಪ್ರಕರಣ, ರೂ.131.00 ಲಕ್ಷ; ದೋಣಿ ಹಾನಿ: 18 ಪ್ರಕರಣ, ರೂ.17.51 ಲಕ್ಷ; ಬಲೆ ಹಾನಿ: 5 ಪ್ರಕರಣ, ರೂ.1.52 ಲಕ್ಷ; ವೈದ್ಯಕೀಯ: 1 ಪ್ರಕರಣ, ರೂ.0.43 ಲಕ್ಷ) ಇತ್ಯರ್ಥಗೊಳಿಸ ಮೀನುಗಾರರಿಗೆ ಒಟ್ಟು ರೂ.150.46 ಲಕ್ಷ ಪರಿಹಾರ ನೀಡಲಾಗಿದೆ.

**5.2 ಸಾಮೂಹಿಕ ಅಪಘಾತ ವಿಮಾ ಯೋಜನೆ (2405–00–120–0–07–106):**

ಕೇಂದ್ರ ಪುರಸ್ಕೃತ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿಯಲ್ಲಿ ಮೀನುಗಾರರ ವಿಮಾ ಕಂತಿನ ಹಣ ತಲಾ ರೂ.20.27 ಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿಶತ 50ರಂತೆ ಪ್ರತಿ ವರ್ಷ ದೆಹಲಿ ಯಲ್ಲಿರುವ ಮೀನುಗಾರಿಕೆ ಸಹಕಾರಿ ಸಂಘಗಳ ರಾಷ್ಟ್ರೀಯ ಮಹಾಮಂಡಳಿಗೆ (ಫಿಶ್ಕೋಫೆಡ್) ರಾಜ್ಯದ 2.05 ಲಕ್ಷ ಮೀನುಗಾರರಿಗೆ ವಿಮಾ ಸೌಲಭ್ಯ ಒದಗಿಸಲು ಪಾವತಿ ಮಾಡಲಾಗಿದೆ. 2018–19 ನೇ ಸಾಲಿನಲ್ಲಿ ರೂ.12.28 ಲಕ್ಷ ವಿಮಾ ಕಂತನ್ನು ರಾಜ್ಯ ಸರ್ಕಾರವು ಫಿಶ್ಕೋಫೆಡ್, ನವದೆಹಲಿಗೆ ಪಾವತಿಸಿದೆ. 2018–19 ನೇ ಸಾಲಿನಲ್ಲಿ ರೂ.18.00 ಲಕ್ಷದ ಪರಿಹಾರ ಮೊತ್ತವನ್ನು 9 ಪ್ರಕರಣಗಳಲ್ಲಿ ಇತ್ಯರ್ಥಗೊಳಿಸಲಾಗಿದೆ.

**5.3 ಕರಾವಳಿ ಮೀನುಗಾರರಿಗೆ ಕೇಂದ್ರ ಪುರಸ್ಕೃತ ಉಳಿತಾಯ ಮತ್ತು ಪರಿಹಾರ ಯೋಜನೆ (2405–00–120–0–07–100):**

ಸದರಿ ಯೋಜನೆಯಡಿಯಲ್ಲಿ ಮೀನುಗಾರಿಕೆ ಅವಧಿಯಲ್ಲಿ ಕರಾವಳಿ ಮೀನುಗಾರರಿಂದ ರೂ.1500 ಗಳನ್ನು ವಸೂಲಿ ಮಾಡಲಾಗುತ್ತದೆ. ಈ ರೀತಿ ವಸೂಲಿ ಮಾಡಿದ ಮೊತ್ತ ರೂ. 1500 ಗಳಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಲಾ ರೂ. 1500 ಗಳನ್ನು ನೀಡಿ, ಹೀಗೆ ಸಂಗ್ರಹಿಸಿದ ಒಟ್ಟು ರೂ.4500/–ಗಳನ್ನು ಮೀನುಗಾರಿಕೆ ಇಲ್ಲದ ಮೂರು ತಿಂಗಳಲ್ಲಿ ಮಾಸಿಕ ತಲಾ ರೂ. 1500 ಗಳನ್ನು ಮೀನುಗಾರರಿಗೆ ನೀಡಲಾಗುವುದು.

2018–19 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.1.00 ಲಕ್ಷಗಳ ಆಂಶಿಕ ಅನುದಾನ ಒದಗಿಸಲಾಗಿತ್ತು. ಹೆಚ್ಚುವರಿ ಅನುದಾನ ರೂ.923.46 ಲಕ್ಷಗಳು ಸೇರಿಸಿ ಒಟ್ಟು ಅನುದಾನ ರೂ.924.46 ಲಕ್ಷಗಳಾಗಿರುತ್ತದೆ. ಇದರಲ್ಲಿ ಕೇಂದ್ರದ ಪಾಲು ರೂ.462.23 ಲಕ್ಷಗಳು (ಪುನರ್ ಮೌಲೀಕರಿಸಿದ) ಸೇರಿದೆ. 39,518 ಫಲಾನುಭವಿಗಳಿಗೆ ಪರಿಹಾರ ನೀಡಲು ರೂ.866.68 ಲಕ್ಷ ವೆಚ್ಚ ಮಾಡಲಾಗಿದೆ.

**5.4 ಮತ್ಸ್ಯ ಆಶ್ರಯ ಯೋಜನೆ (2405–00–103–0–20)**

ಮೀನುಗಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಮತ್ಸ್ಯಾಶ್ರಯ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ಮತ್ಸ್ಯಾಶ್ರಯ ಯೋಜನೆಯಡಿ ಮನೆ ನಿರ್ಮಾಣಕ್ಕೆ ಸಾಮಾನ್ಯ ಮೀನುಗಾರರಿಗೆ ರೂ.1.20 ಲಕ್ಷ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ರೂ 1.75 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ 2.00 ಲಕ್ಷ ಸಹಾಯಧನ ನೀಡಲಾಗುವುದು. 2017–18 ನೇ ಸಾಲಿಗೆ 3000 ಮನೆಗಳನ್ನು ಹಂಚಿಕೆ ಮಾಡಲಾಗಿದೆ.

2018–19 ನೇ ಸಾಲಿನಲ್ಲಿ ರೂ.400.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಈ ಮೊತ್ತವನ್ನು ನೋಡಲ್ ಸಂಸ್ಥೆಯಾದ ರಾಜೀವ್ ಗಾಂಧಿ ವಸತಿ ನಿಗಮ, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.

**5.5 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ (2405–00–101–0–66)**

ಈ ಯೋಜನೆಯಡಿ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2018–19 ನೇ ಸಾಲಿನಲ್ಲಿ ಈ ಯೋಜನೆಯಡಿ ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆಗೆ ಅವಕಾಶ ಮಾಡಲಾಗಿದೆ. 2018–19ನೇ ಸಾಲಿನಲ್ಲಿ ರೂ.8.00 ಲಕ್ಷಗಳ ಅನುದಾನ ನಿಗಧಿ ಪಡಿಸಲಾಗಿದ್ದು, ರೂ.7.98 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 40 ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆದಿರುತ್ತಾರೆ.

### 5.6 ಗಿರಿಜನ ಉಪಯೋಜನೆ (2405–00–790–0–00)

ಈ ಯೋಜನೆಯಡಿ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಪರಿಶಿಷ್ಠ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2018–19 ನೇ ಸಾಲಿನಲ್ಲಿ ಸಂಚಾರಿ/ ರೀಟೇಲ್ ಮೀನು ಕ್ಯಾಂಟೀನ್/ ತಾಜಾ ಮೀನು ಮಾರಾಟ ವಾಹನಗಳನ್ನು ಖರೀದಿಸಲು ಅವಕಾಶ ಮಾಡಲಾಗಿದೆ. 2018–19 ನೇ ಸಾಲಿನಲ್ಲಿ ರೂ.103.00 ಲಕ್ಷಗಳ ಅನುದಾನ ನಿಗಧಿ ಪಡಿಸಲಾಗಿರುತ್ತದೆ. ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ.102.98 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 15 ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.

## 6. ಸಂಸ್ಕರಣೆ, ಸಂರಕ್ಷಣೆ ಮತ್ತು ಮಾರಾಟ:

ರಾಜ್ಯದಲ್ಲಿನ ಮೀನುಗಾರಿಕೆ ವಲಯದಲ್ಲಿ ದಿನಂಪ್ರತಿ 5609 ಟನ್ನು ಮಂಜುಗಡ್ಡೆ ಉತ್ಪಾದನೆಯ ಸಾಮರ್ಥ್ಯವುಳ್ಳ 195 ಮಂಜುಗಡ್ಡೆ ಕಾರ್ಖಾನೆಗಳು, 2925 ಟನ್ನುಗಳ ದಾಸ್ತಾನು ಸಾಮರ್ಥ್ಯವುಳ್ಳ 49 ಶೀತಲಗೃಹಗಳು, 1255 ಟನ್ನು ದಾಸ್ತಾನು ಸಾಮರ್ಥ್ಯವುಳ್ಳ 11 ಘನೀಕೃತ ದಾಸ್ತಾನು ಮಳಿಗೆಗಳು, 175 ಟನ್ ಘನೀಕರಣ ಸಾಮರ್ಥ್ಯವುಳ್ಳ 14 ಘನೀಕರಣ ಘಟಕಗಳಿವೆ. ಅಲ್ಲದೆ 528.50 ಟನ್ ಸಾಮರ್ಥ್ಯವುಳ್ಳ 8 ಡಬ್ಬೀಕರಣ ಘಟಕಗಳು, ಹಾಗೂ 424.50 ಟನ್ ಸಾಮರ್ಥ್ಯವುಳ್ಳ 21 ಮೀನು ಹುಡಿ ಘಟಕಗಳಿವೆ.

ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಒಂದು ಮೀನುಗಾರಿಕೆ ಅಭಿವೃದ್ಧಿ ನಿಗಮ ಮತ್ತು ಎರಡು ಜಿಲ್ಲಾ ಸಹಕಾರಿ ಮೀನು ಮಾರಾಟ ಮಹಾಮಂಡಳಿಗಳು ಅಸ್ತಿತ್ವದಲ್ಲಿದ್ದು ಇವುಗಳು ಕೆಲವು ಬಂದರುಗಳಲ್ಲಿ ಮೀನುಗಾರರು ಹಿಡಿದು ತರುವ ಸೀಗಡಿ ಮತ್ತು ತಾಜಾ ಮೀನನ್ನು ಮಾರಾಟ ಮಾಡುತ್ತಿವೆ. ಮೀನುಗಾರರಿಗೆ ಬೇಕಾದ ಡೀಸಲ್, ಮೀನುಗಾರಿಕೆ ಸಲಕರಣೆ, ಬಿಡಿ ಭಾಗ, ಮುಂತಾದವುಗಳನ್ನು ಒದಗಿಸಿ ನಂತರ ಹಿಡಿದ ಮೀನನ್ನು ಅವರಿಂದ ಪಡೆದು ಮಾರಾಟ ಮಾಡಿ ಸಾಲವನ್ನು ವಾಪಸ್ಸು ಪಡೆದುಕೊಳ್ಳುವ ವ್ಯವಸ್ಥೆಯನ್ನು ಈ ಸಂಸ್ಥೆಗಳು ಅಳವಡಿಸಿಕೊಂಡಿವೆ.

### 6.1 ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ಸಹಾಯ (2405–00–105–0–09)

ಮೀನು ಮಾರುಕಟ್ಟೆಗಳನ್ನು ಸ್ಥಳೀಯ ಸಂಸ್ಥೆಗಳು ನಿರ್ಮಿಸಿ ನಿರ್ವಹಿಸುತ್ತಿದ್ದಾರೆ. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ರವರು ಮೀನುಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಯೋಜನಾ ವೆಚ್ಚದ ಶೇ.50 ರಷ್ಟು ಸಹಾಯಧನವಾಗಿ ನೀಡಲು ಯೋಜನೆ ಹಮ್ಮಿಕೊಂಡಿರುತ್ತಾರೆ. ಈ ಹಿಂದೆ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯಿಂದ ಶೇ.90 ರಷ್ಟು ಸಹಾಯ ನೀಡಲಾಗುತ್ತಿದ್ದು, ಸ್ಥಳೀಯ ಸಂಸ್ಥೆಗಳ ಸಹಾಯಕ್ಕಾಗಿ ಈ ಯೋಜನೆಯಡಿ ಶೇ.10 ರಷ್ಟಿನ ಮೊತ್ತ ಗರಿಷ್ಠ ರೂ.25.00 ಲಕ್ಷಗಳನ್ನು ರಾಜ್ಯ ಸರ್ಕಾರವು ಭರಿಸುತ್ತದೆ. ಮೀನುಗಾರರ ಸಹಕಾರ ಸಂಘಗಳಿಗೆ ತಮ್ಮ ಸ್ವಂತ ನಿವೇಶನದಲ್ಲಿ ನೀರು, ವಿದ್ಯುಚ್ಛಕ್ತಿ ಮತ್ತು ಇತರ ಸೌಲಭ್ಯಗಳೊಂದಿಗೆ ಮೀನು ಸಂಗ್ರಹಣೆ ಹಾಗೂ ಮಾರುಕಟ್ಟೆ ಕಟ್ಟಡವನ್ನು ನಿರ್ಮಿಸಲು ಅಂದಾಜು 10 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ ಶೇ.75 ರಷ್ಟು ಗರಿಷ್ಠ ರೂ.7.50 ಲಕ್ಷ ಸಹಾಯಧನವನ್ನು ಒದಗಿಸಲಾಗುವುದು.

2018–19ನೇ ಸಾಲಿನಲ್ಲಿ "ಮತ್ಸ್ಯ ಜೋಪಾಸನೆ ಯೋಜನೆ" ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಮೀನು ಮಾರಾಟಗಾರರು ಮಾರಾಟವಾಗದೇ ಉಳಿಯುವ ಮೀನನ್ನು ಮೀನು ಮಾರುಕಟ್ಟೆಗಳಲ್ಲಿ ಶೀಥಲೀಕೃತ ಘಟಕದಲ್ಲಿ ಸಂಗ್ರಹಿಸಲು ರಾಜ್ಯದಲ್ಲಿ ಶಿಥಲೀಕೃತ ಘಟಕಗಳನ್ನು ಗರಿಷ್ಟ ತಲಾ 10 ಲಕ್ಷ ರೂ. ವೆಚ್ಚದಲ್ಲಿ ಸ್ಥಾಪಿಸಲು ಅವಕಾಶ ಮಾಡಲಾಗಿದೆ. ಇದಕ್ಕಾಗಿ ರೂ.100.00 ಲಕ್ಷ ಅನುದಾನ

ಕಾಯ್ದಿರಿಸಲಾಗಿದ್ದು, ಈ ಮೊತ್ತವನ್ನು ಅನುಷ್ಠಾನ ಸಂಸ್ಥೆಯಾದ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇವರಿಗೆ 19 ಘಟಕಗಳ ಸ್ಥಾಪನೆಗೆ ಬಿಡುಗಡೆ ಮಾಡಲಾಗಿದೆ.

ಮೀನುಗಾರರ ಸಹಕಾರ ಸಂಘಗಳ ಮೂಲಕ ಮೀನು ನಿರ್ವಹಣಾ ಮತ್ತು ಮಾರಾಟ ಕೇಂದ್ರ ನಿರ್ಮಾಣಕ್ಕಾಗಿ 2 ನೇ ಕಂತಿನ ಮೊತ್ತ ನೀಡಲು ರೂ.40.00 ಲಕ್ಷ ಅನುದಾನ ಕಾಯ್ದಿರಿಸಲಾಗಿದ್ದು, ಪೂರ್ಣ ಅನುದಾನ 10 ಘಟಕಗಳಿಗೆ ನೀಡಿ ವೆಚ್ಚ ಮಾಡಲಾಗಿದೆ. ಮಾರುಕಟ್ಟೆ ನಿರ್ಮಾಣ ಯೋಜನೆಯಡಿ ರೂ.10.00 ಲಕ್ಷ ಕಾಯ್ದಿರಿಸಲಾಗಿದ್ದು, ಮೈಸೂರಿನಲ್ಲಿ ಮೀನು ಮಾರುಕಟ್ಟೆ ನಿರ್ಮಾಣಕ್ಕೆ ರೂ.9.87 ಲಕ್ಷಗಳನ್ನು ಅನುಷ್ಠಾನ ಸಂಸ್ಥೆಗಳ ಬಿಡುಗಡೆ ಮಾಡಲಾಗಿದೆ.

ಹೀಗೆ ಈ ಯೋಜನೆಯಡಿ ಒದಗಿಸಿದ ಅನುದಾನ ರೂ.150.00 ಲಕ್ಷಗಳಿಗೆ ರೂ.149.87 ಲಕ್ಷ ವೆಚ್ಚ ಮಾಡಲಾಗಿದೆ.

**7. ಮೀನುಗಾರರ ಸಹಕಾರ ಸಂಘಗಳು:**

ರಾಜ್ಯದಲ್ಲಿ 624 ಮೀನುಗಾರಿಕೆ ಸಹಕಾರ ಸಂಘಗಳು ಅಸ್ತಿತ್ವದಲ್ಲಿದ್ದು, ಇವುಗಳಲ್ಲಿ 566 ಸಂಘಗಳು ಕಾರ್ಯಾಚರಣೆಯಲ್ಲಿದ್ದು 58 ಸಂಘಗಳು ಸ್ಥಗಿತಗೊಂಡಿರುತ್ತವೆ. ಇವುಗಳಲ್ಲದೆ ಕರಾವಳಿ ಜಿಲ್ಲೆಗಳಲ್ಲಿ ಎರಡು ಮೀನು ಮಾರಾಟ ಮಹಾಮಂಡಳಿಗಳು ಮತ್ತು ಒಳನಾಡಿನಲ್ಲಿ ಒಂದು ರಾಜ್ಯ ಮಟ್ಟದ ಮಹಾಮಂಡಳಿ ಕಾರ್ಯಾಚರಣೆಯಲ್ಲಿವೆ. ಈ ಸಹಕಾರ ಸಂಘಗಳ ಕಾರ್ಯ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಪಾಲು ಬಂಡವಾಳ ನೀಡುವಿಕೆ, ಸಲಕರಣೆ ಸಾಲ, ವ್ಯವಸ್ಥಾಪಕ ಸಹಾಯಧನ ನೀಡುವಿಕೆ, ಮುಂತಾದ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಮೀನುಗಾರಿಕೆ ಸಹಕಾರ ಸಂಘಗಳಲ್ಲಿ ಒಟ್ಟು 2.05 ಲಕ್ಷ ಸದಸ್ಯರಿರುತ್ತಾರೆ.

**8. ಇತರೆ ಯೋಜನೆಗಳು:**

**8.1 ಸಂಶೋಧನೆ, ವಿಸ್ತರಣೆ, ಪ್ರದರ್ಶನ ಮತ್ತು ತರಬೇತಿ (2405-00-109-0-01):**

ಮೀನುಗಾರಿಕೆ ವಿಸ್ತರಣೆ ಕಾರ್ಯಕ್ರಮಗಳಾದ ಪ್ರಚಾರ, ಕಾರ್ಯಾಗಾರ, ಸಾಕ್ಷ್ಯಚಿತ್ರ ತಯಾರಿಕೆ, ಮತ್ಸ್ಯಮೇಳ ಏರ್ಪಡಿಸಲು, ಯೋಜನೆಗಳ ಮೌಲ್ಯಮಾಪನಾ ವೆಚ್ಚ, ತರಬೇತಿ, ಮೀನು ಕೃಷಿಕರ ದಿನಾಚರಣೆ, ಇತ್ಯಾದಿ. 2018-19ನೇ ಸಾಲಿನಲ್ಲಿ ರೂ.167.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಈ ಪೈಕಿ ರೂ.160.40 ಲಕ್ಷ ವೆಚ್ಚ ಮಾಡಲಾಗಿದೆ. 27 ಮೀನು ಕೃಷಿಕರ ದಿನಾಚರಣೆ, 27 ತರಬೇತಿ ಮತ್ತು 3 ಮತ್ಸ್ಯಮೇಳಗಳನ್ನು ಏರ್ಪಡಿಸಲಾಗಿದೆ.

**8.2 ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು (2405-00-800-0-28):**

ಮೀನುಗಾರರು ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ವಾಣಿಜ್ಯ ಬ್ಯಾಂಕಿನಿಂದ ಶೇ.2 ರ ಬಡ್ಡಿ ದರದಲ್ಲಿ ರೂ.50,000 ಗಳ ವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ. ವಾಣಿಜ್ಯ ಬ್ಯಾಂಕುಗಳು ಮೀನುಗಾರರಿಗೆ ಸಾಲ ನೀಡಿದ ಪ್ರಯುಕ್ತ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಅವಕಾಶ ಕಲ್ಪಿಸಲಾಗಿದೆ.

2018-19ನೇ ಸಾಲಿನಿಂದ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000 ರೂ.ಗಳವರೆಗೆ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಪಡೆಯಲು ಅವಕಾಶ ಮಾಡಲಾಗಿದೆ.

2018-19 ನೇ ಸಾಲಿನಲ್ಲಿ ರೂ.500.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ. ಈ ಯೋಜನೆಯಿಂದ ರೂ.38.00 ಲಕ್ಷಗಳನ್ನು ಹೊರ ಗುತ್ತಿಗೆ ಸಿಬ್ಬಂದಿಗಳಿಗೆ ಪಾವತಿಸಲು ನಿರ್ದೇಶನ ಮತ್ತು ಆಡಳಿತ ಯೋಜನೆಗೆ ಮರುಹೊಂದಾಣಿಕೆ ಮಾಡಲಾಗಿದೆ. ಉಳಿದ ಅನುದಾನ ರೂ.462.00 ಲಕ್ಷಗಳನ್ನು ಪೂರ್ಣವಾಗಿ 29,652 ಮೀನುಗಾರರ ಕ್ಲೇಮುಗಳನ್ನು ಇತ್ಯರ್ಥಗೊಳಿಸಲು ವೆಚ್ಚ ಮಾಡಲಾಗಿದೆ.

**8.3 ನೀಲಿ ಕ್ರಾಂತಿ – ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (2405–00–101–0–58)**

ಮೀನುಗಾರಿಕೆ ವಲಯದಲ್ಲಿ ಮಹತ್ತರ ಬೆಳವಣಿಗೆ ತರುವ ಸಲುವಾಗಿ ಕೇಂದ್ರ ಸರ್ಕಾರವು ಕೇಂದ್ರ ಪುರಸ್ಕೃತ ನೀಲಿ ಕ್ರಾಂತಿ – ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ (Blue Revolution: Integrated Development and Management of Fisheries) ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿ ಮೀನುಗಾರಿಕೆ ವಲಯದ ಮತ್ತು ಮೀನುಗಾರರ ಸಾಮಾಜಿಕ ಮತ್ತು ಆರ್ಥಿಕ ಸರ್ವತೋಮುಖ ಅಭಿವೃದ್ಧಿಗಾಗಿ ಈ ಕೆಳಕಂಡ ವಿವಿಧ ಕಾರ್ಯಕ್ರಮಗಳನ್ನು ಅಳವಡಿಸಲಾಗಿದೆ.

1. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು
2. ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ
3. ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ
4. ಮೀನುಗಾರಿಕೆ ವಲಯದ ದತ್ತಾಂಶ ಮತ್ತು ಭೂಶಾಸ್ತ್ರ ಮಾಹಿತಿ ವ್ಯವಸ್ಥೆಯನ್ನು ಬಲಪಡಿಸುವುದು
5. ಮೀನುಗಾರಿಕೆ ವಲಯಕ್ಕೆ ಸಾಂಸ್ಥಿಕ ವ್ಯವಸ್ಥೆ
6. ಮಾನಿಟರಿಂಗ್, ಕಂಟ್ರೋಲ್ ಮತ್ತು ಸರ್ವೀಲೆನ್ಸ್ ಮತ್ತು ಇತರೆ ಅಗತ್ಯ ಆಧಾರಿತ ಅಳವಡಿಕೆಗಳು
7. ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ

2018–19ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.100.00 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ. 2016–17 ನೇ ಸಾಲಿನ ಉಳಿಕೆ ಮೊತ್ತ ರೂ.232.20 ಲಕ್ಷಗಳನ್ನು ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ಕರ ಮರುಪಾವತಿ ಯೋಜನೆಯಿಂದ ಪುನರ್ ವಿನಿಯೋಗ ಮಾಡಿ ಒದಗಿಸಲಾಗಿರುತ್ತದೆ. 2017–18 ನೇ ಸಾಲಿನ ಉಳಿಕೆ ಮೊತ್ತ ರೂ.730.23 ಲಕ್ಷಗಳನ್ನು (ಕೇಂದ್ರ:ರೂ.438.14 ಲಕ್ಷ; ರಾಜ್ಯ:ರೂ.292.09 ಲಕ್ಷ) ಬಳಸಲು ರೂ.630.23 ಲಕ್ಷಗಳನ್ನು ಹೆಚ್ಚುವರಿ ಅನುದಾನವಾಗಿ ನೀಡಲಾಗಿದೆ. ಹೀಗೆ ಒಟ್ಟು ರೂ.962.43 ಲಕ್ಷಗಳನ್ನು ವಿವಿಧ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತದಲ್ಲಿ ರೂ.939.45 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2018–19 ನೇ ಸಾಲಿನಲ್ಲಿ ಪ್ರಸ್ತಾವಿಸಲಾದ ಕಾರ್ಯಕ್ರಮಗಳಿಗೆ ಮಾರ್ಚ್ 2019 ರ ಕೊನೆಯ ವಾರದಲ್ಲಿ ರೂ.751.28 ಲಕ್ಷ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

**8.4 ನಿರ್ದೇಶನ ಮತ್ತು ಆಡಳಿತ (2405–00–001–0–01)**

ಈ ಲೆಕ್ಕ ಶೀರ್ಷಿಕೆಯಡಿ ರಾಜ್ಯ ವಲಯ ಯೋಜನೆಯಡಿ ಮಂಜೂರಾದ ಕೇಂದ್ರ ಕಛೇರಿ ಹಾಗೂ ಇತರೆ ಕಛೇರಿಗಳ ಸಿಬ್ಬಂದಿ ವೆಚ್ಚ, ಅಭಿಯಂತರರ ಸಂಬಳ, ಗಣಕಯಂತ್ರ, ಫ್ಯಾಕ್ಸ್ ಯಂತ್ರ ಮತ್ತು ಇತರೆ ವಿದ್ಯುನ್ಮಾನ ಉಪಕರಣಗಳ ಅಳವಡಿಕೆ ಮತ್ತು ಅವುಗಳ ನಿರ್ವಹಣೆ, ವಾಹನ ಖರೀದಿ, ಇತ್ಯಾದಿ ವೆಚ್ಚವನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ ಇಲಾಖೆಯ ಕಛೇರಿಗಳ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಆಧುನೀಕರಣ ಮತ್ತು ದುರಸ್ತಿ ಕೆಲಸಗಳನ್ನು ತೆಗೆದುಕೊಳ್ಳಲು, ಮತ್ಸ್ಯಾಲಯಗಳ ಕಾಮಗಾರಿಗಳು ಮತ್ತು ನಿರ್ವಹಣೆಗೆ ಬೇಕಾಗುವ ಸಲಕರಣೆಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು, ಅವಕಾಶ ಕಲ್ಪಿಸಲಾಗಿದೆ. 2018–19 ನೇ ಸಾಲಿನಲ್ಲಿ ರೂ.1146.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ ಹಾಗೂ ರೂ.38.00 ಲಕ್ಷಗಳನ್ನು (ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು–2405–00–800–0–28) ಪುನರ್ ವಿನಿಯೋಗದಿಂದ ಒದಗಿಸಲಾಗಿರುತ್ತದೆ. ರೂ.1338.71 ಲಕ್ಷ ವೆಚ್ಚ ಮಾಡಲಾಗಿದೆ.

### 8.5 ಒಳನಾಡು ಮೀನುಗಾರಿಕೆ ಅಂಕಿ ಅಂಶಗಳು (ಕೇಂದ್ರ ವಲಯ ಯೋಜನೆ) (2405–00–101–0–06)

ಈ ಲೆಕ್ಕ ಶೀರ್ಷಿಕೆಯಡಿ ಒಳನಾಡು ಮತ್ತು ಕರಾವಳಿ ಮೀನುಗಾರಿಕೆಯ ಅಂಕಿಅಂಶಗಳನ್ನು ಸಂಗ್ರಹಿಸಲು ಮಾದರಿ ವಿಧಾನಗಳನ್ನು ಅಭಿವೃದ್ಧಿ ಪಡಿಸಲು ಮಂಜೂರು ಮಾಡಿರುವ ಹುದ್ದೆಗಳ ಸಿಬ್ಬಂದಿ ವೆಚ್ಚ, ಗಣಕೀಕೃತ ಯಂತ್ರಗಳ ಖರೀದಿ, ಗಣತೀದಾರರ ನೇಮಕಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದು ಕೇಂದ್ರ ವಲಯ ಯೋಜನೆಯಾಗಿದ್ದು ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರದಿಂದ ಭರಿಸಲಾಗುವುದು. 2018–19 ನೇ ಸಾಲಿನಲ್ಲಿ ರೂ.27.00 ಲಕ್ಷ ಅನುದಾನ ಒದಗಿಸಿದ್ದು, ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗದ ಪ್ರಯುಕ್ತ ವೆಚ್ಚ ಆಗಿರುವುದಿಲ್ಲ. ವೇತನಕ್ಕಾಗಿ ರೂ.7.01 ಲಕ್ಷ ವೆಚ್ಚ ಮಾಡಲಾಗಿದೆ.

### 8.6 ಮೀನು ಹಿಡುಯುವ ದೋಣಿಗಳ ಯಾಂತ್ರೀಕರಣ ಮತ್ತು ಸುಧಾರಣೆ (2405–00–110–0–01)

ಸದರಿ ಯೋಜನೆಯಡಿ ಸಿಬ್ಬಂದಿ ಹಾಗೂ ಕಛೇರಿ ವೆಚ್ಚ ಭರಿಸಲಾಗುತ್ತಿದೆ. 2018–19 ನೇ ಸಾಲಿನಲ್ಲಿ ರೂ.11.00 ಲಕ್ಷ ಅನುದಾನ ಒದಗಿಸಿದ್ದು, ರೂ.7.43 ಲಕ್ಷ ವೆಚ್ಚ ಮಾಡಲಾಗಿದೆ.

### 8.7 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 2018–19 ನೇ ಸಾಲಿನಲ್ಲಿ ರೂ.388.00 ಲಕ್ಷ ವೆಚ್ಚದಲ್ಲಿ ಒಳನಾಡು ಮೀನುಗಾರಿಕೆ ಹೆಚ್ಚಿಸಲು ನೆರವು ಯೋಜನೆಯಡಿ ಸಲಕರಣೆ ಕಿಟ್ ಮತ್ತು ಹರಿಗೋಲು ವಿತರಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ, ಈ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮಂಜೂರಾತಿ ಪಡೆಯಲಾಗಿರುತ್ತದೆ. ಈ ಪೈಕಿ ರೂ.388.00 ಲಕ್ಷ ವೆಚ್ಚ ಮಾಡಲಾಗಿದೆ. 1278 ಮೀನುಗಾರರಿಗೆ ಸಲಕರಣೆ ಕಿಟ್/ಹರಿಗೋಲುಗಳನ್ನು ವಿತರಿಸಲಾಗಿದೆ. ಮೆಣಸಿನ ಹಳ್ಳಿ ಮೀನು ಮರಿ ಕೇಂದ್ರ, ಭದ್ರ ಜಲಾಶಯ ಯೋಜನೆ, ಶಿವಮೊಗ್ಗ (ರೂ.1.34 ಕೋಟಿ) ಮತ್ತು ಮಾರ್ಕಂಡೇಯ ಮೀನು ಮರಿ ಕೇಂದ್ರ, ಕೋಲಾರ (ರೂ.1.27 ಕೋಟಿ) ಗಳನ್ನು ಉನ್ನತೀಕರಿಸಲು ಕ್ರಮವಹಿಸಲಾಗಿದೆ.

## 9. ಜಿಲ್ಲಾ ಪಂಚಾಯತ್ ಯೋಜನೆಗಳ ವಿವರ:

### 9.1 ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ (2405–00–101–0–27)

ಈ ಲೆಕ್ಕ ಶೀರ್ಷಿಕೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ, ಕಾರವಾರ, ಹಾಸನ, ಬೆಳಗಾವಿ, ಕಲಬುರ್ಗಿ, ದಕ್ಷಿಣ ಕನ್ನಡ, ಬೀದರ್, ಕೋಲಾರ, ಕೊಡಗು ಮತ್ತು ವಿಜಯಪುರ ಜಿಲ್ಲೆಗಳ ಮತ್ಸ್ಯಾಲಯಗಳ 2018–19 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.418.00 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.413.10 ಲಕ್ಷ ವೆಚ್ಚ ಮಾಡಲಾಗಿದೆ. ಈ ಮೊತ್ತದಲ್ಲಿ 111 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

### 9.2 ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ (2405–00–101–0–28):

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/– ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ ಮೀರದಂತೆ

ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಯೋಜನೆಯ ಅನುಷ್ಠಾನಕ್ಕೆ 2018–19ನೇ ಸಾಲಿನಲ್ಲಿ ರೂ.575.30 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಈ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಟ್ಟು ರೂ.526.46 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2791 ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆದಿರುತ್ತಾರೆ.

### 9.3 ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ (2405–00–101–0–30)

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.2000 ಸಹಾಯ ಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.10000/– ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋ ರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30,000 ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.35,000 ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/– ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5000/– ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

2018–19ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.157.50 ಲಕ್ಷ ಆಯವ್ಯಯ ಒದಗಿಸಿದ್ದು, ರೂ.155.20 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 1189 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

### 9.4 ಪ್ರದರ್ಶನ ಮತ್ತು ತರಬೇತಿ (2405–00–101–0–32):

ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು. ಹಾಗೂ ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು, ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು. 2018–19ನೇ ಸಾಲಿನಲ್ಲಿ ಪ್ರದರ್ಶನ ಮತ್ತು ತರಬೇತಿಗೆ ರೂ.91.20 ಲಕ್ಷ ಅನುದಾನ ಒದಗಿಸಲಾಗಿದ್ದು ರೂ.88.82 ಲಕ್ಷ ವೆಚ್ಚವಾಗಿದೆ.

### 9.5 ಜಿಲ್ಲಾ ಮತ್ತು ಇತರೆ ಸಿಬ್ಬಂದಿ (2405–00–101–0–26) ಜಿಲ್ಲಾ ವಲಯ:

ಸದರಿ ಯೋಜನೆಯಡಿ ಜಿಲ್ಲಾ ವಲಯದ ಸಿಬ್ಬಂದಿ ವೇತನ ಮತ್ತು ಇತರೆ ವೆಚ್ಚಗಳನ್ನು ಭರಿಸಲು ಅನುದಾನ ಕಲ್ಪಿಸಲಾಗಿದೆ. 2018–19 ನೇ ಸಾಲಿನಲ್ಲಿ ರೂ.2142.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ರೂ.2291.20 ಲಕ್ಷ ವೆಚ್ಚ ಮಾಡಲಾಗಿದೆ.

2018–19 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಗಳ ಅನುಷ್ಠಾನದಲ್ಲಿ ಸಾಧಿಸಲಾದ ಆರ್ಥಿಕ ಪ್ರಗತಿಯನ್ನು ಕೆಳಗೆ ನಮೂದಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| **ಯೋಜನೆ** | **ಅನುದಾನ** | **ವೆಚ್ಚ** |
|---|---|---|
| 1) ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ | 418.00 | 413.10 |
| 2) ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ | 575.30 | 526.46 |
| 3)ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ | 157.50 | 155.20 |
| 4) ಪ್ರದರ್ಶನಗಳು ಮತ್ತು ತರಬೇತಿ | 91.20 | 88.82 |
| 5) ಜಿಲ್ಲಾ ಮತ್ತು ಇತರೆ ಸಿಬ್ಬಂದಿ | 2142.00 | 2291.20 |
| **ಒಟ್ಟು** | **3384.00** | **3474.78** |

**10. ವೆಚ್ಚ ಮತ್ತು ಆದಾಯ:**

2017–18 ಮತ್ತು 2018–19ನೇ ಸಾಲುಗಳಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ಆಗಿರುವ ವೆಚ್ಚ ಮತ್ತು ಆದಾಯದ ವಿವರಗಳು ಕೆಳಕಂಡಂತಿವೆ.

(ರೂ.ಲಕ್ಷಗಳಲ್ಲಿ)

| **ಕ್ರ.ಸಂ.** | **ಯೋಜನೆಗಳು** | **2017–18** | **2018–19** |
|---|---|---|---|
| 1 | ರಾಜ್ಯ ವಲಯದ ಯೋಜನೆಗಳ ವೆಚ್ಚ | 29498.64 | 33314.36 |
| 2 | ಜಿಲ್ಲಾ ಪಂಚಾಯತ್ ಯೋಜನೆಗಳ ವೆಚ್ಚ | 2695.83 | 3474.98 |
| 3 | ಆದಾಯ | 1193.96 | 1897.93 |

**ಮೀನುಗಾರಿಕೆ ನಿರ್ದೇಶಕರು**

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂ. ಕಾ.ಸೂ. ಪ್ರತಿಗಳು (ಪಿ1)